# ದೇವದಾಸಿ ಪದ್ಧತಿಯ ಮತ್ತು ಮಕ್ಕಳ ಮೇಲಿನ ಲೈಂಗಿಕ ಕಿರುಕುಳಗಳ ವಿರುದ್ಧ ಹೋರಾಡುವುದು

## ಕಾನೂನು ಜಾರಿ ಸಂಸ್ಥೆಗಳು ಮತ್ತು ಸೇವಾ ಪೂರೈಕೆದಾರರಿಗೆ ಒಂದು ಕೈಪಿಡಿ




ಪಕಾಶನ

ARZ
Anyay Rahit Zindagi

ಇವರಿಂದ ಬೆಂಬಲಿತ

We World

ಎನ್ ಜಿ ಒ ಸಹಭಾಗಿ

SNEHA

**ಪಕಾಶನ**
ARZ
Flat No.4, 1st Floor, Our Lady of Guia Building,
Vasco da Gama, Goa - 403802 (INDIA)
ದೂರವಾಣಿ: +91–832–2501416 (ಕಚೇರಿ)
arzindia@gmail.com
www.arzindia.org
www.stoptrafficking.in

**We World** ಇವರಿಂದ ಬೆಂಬಲಿತ

**Partner NGO** Sneha

ಪ್ರಸ್ತುತ ಪಡಿಸುವವರು 'ಫ್ಯಾಬಿಯನ್ ಗೊನ್ಸಾಲ್ವ್ಸ್'

ಪ್ರಸ್ತುತ ಪಡಿಸುವವರು 'ಏಲಿಯಟ್ ಗ್ರ್ಯೋಟ್'

ದೇವದಾಸಿ ಪದ್ಧತಿಯ ವಿರುದ್ಧ ಹೋರಾಡುವುದು ಮತ್ತು ಮಕ್ಕಳ ಲೈಂಗಿಕ ಕಿರುಕುಳ © ARZ, 2019
ಈ ಪ್ರಕಟಣೆಯನ್ನು ಪುನರ್ ಮುದ್ರಿಸುವಂತಿಲ್ಲ, ಬದಲಾವಣೆ ಮಾಡುವಂತಿಲ್ಲ, ಯಾವುದೇ ರೂಪದಲ್ಲಿ ಅಥವಾ ರೀತಿಯಲ್ಲಿ, ವಿದ್ಯುನ್ಮಾನ, ಛಾಯಾಚಿತ್ರ, ಅಥವಾ ಬೇರೆಯಾವುದೇ ರೀತಿಯಲ್ಲಿ, ಈ ಪುಸ್ತಕದ ಪ್ರಕಾಶಕರ ಲಿಖಿತ ಒಪ್ಪಿಗೆಯ ಹೊರತಾಗಿ ಬದಲಾಯಿಸುವಂತಿಲ್ಲ.

# ದೇವದಾಸಿ ಪದ್ಧತಿಯ ಮತ್ತು ಮಕ್ಕಳ ಮೇಲಿನ ಲೈಂಗಿಕ ಕಿರುಕುಳಗಳ ವಿರುದ್ಧ ಹೋರಾಡುವುದು

## ಕಾನೂನು ಜಾರಿ ಸಂಸ್ಥೆಗಳು ಮತ್ತು ಸೇವಾ ಪೂರೈಕೆದಾರರಿಗೆ ಒಂದು ಕೈಪಿಡಿ

ಪಕಾಶನ

ARZ Anyay Rahit Zindagi

ಇವರಿಂದ ಬೆಂಬಲಿತ

We World

ಎನ್ ಜಿ ಒ ಸಹಭಾಗಿ

SNEHA

# ಪರಿವಿಡಿ

ದೇವದಾಸಿಯರ ಉಲ್ಲೇಖ
ಮುನ್ನುಡಿ – ನಿರ್ದೇಶಕರು, ಎಆರ್‌ಝಡ್(ಅನನ್ಯ ರಹಿತ್ ಝಿಂದಗಿ), NGO

**I: ದೇವದಾಸಿ ಪದ್ದತಿಯ ಬಗ್ಗೆ**

–ಹಿನ್ನೆಲೆ ... **1 ...**
–ಪುರಾಣಗಳು ... **2 ...**
–ದುರ್ಬಲ ಮಹಿಳೆಯರು ... **3 ...**

**II: ಕಾನೂನು ಪ್ರಾಧಿಕಾರ: ಅಪರಾಧ**

–ಸಮರ್ಪಣೆ ... **4 ...**
–ಸಮರ್ಪಣೆ ಮತ್ತು ಮಕ್ಕಳ ಲೈಂಗಿಕ ಕಿರುಕುಳ ... **6 ...**
–ಸಮರ್ಪಣೆ ಮತ್ತು ಆರ್ಥಿಕ ಲೈಂಗಿಕ ಶೋಷಣೆ ... **7 ...**

**III: ದೇವದಾಸಿ ಪದ್ದತಿ – ಪರಿಹಾರ, ಸಂರಕ್ಷಣೆ, ಮತ್ತು ಪುನರ್ ವಸತಿ:**

–ಪರಿಹಾರ ... **11 ...**

- ಕರ್ನಾಟಕ ದೇವದಾಸಿ (ಸಮರ್ಪಣೆಯ ನಿಷೇಧ) ಕಾಯಿದೆ, 1982 ಮತ್ತು ತಿದ್ದುಪಡಿ ಕಾಯಿದೆ, 2010 – KDPD ಕಾಯಿದೆ].
- ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯಿದೆ, 2012
- ಹದಿಹರೆಯದ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯಿದೆ, 2015

–ತಡೆಯುವಿಕೆ ... **13 ...**
–ಸಂರಕ್ಷಣೆ ಮತ್ತು ಪುನರ್ ವಸತಿ ... **14 ...**

# ಪರಿವಿಡಿ

## ಮಕ್ಕಳ ಲೈಂಗಿಕ ಕಿರುಕುಳ


ಮಕ್ಕಳ ಲೈಂಗಿಕ ಕಿರುಕುಳ ಎಂದರೇನು? .............................................. ... 17 ...

ಕಟ್ಟುಕಥೆಗಳು ಮತ್ತು ಸತ್ಯಗಳು ................................................ ... 18 ...

ಲೈಂಗಿಕ ಕಿರುಕುಳದಿಂದಾಗಿ ಮಕ್ಕಳು ಹೆಚ್ಚು ಅಪಾಯದಲ್ಲಿದ್ದಾರೆ .................. ... 19 ...

ಮಕ್ಕಳ ಲೈಂಗಿಕ ಕಿರುಕುಳದ ವಿವರಗಳು ............................................... ... 20 ...

ಮಕ್ಕಳ ಲೈಂಗಿಕ ಕಿರುಕುಳವನ್ನು ಗುರುತಿಸುವುದು ..................................... ... 22 ...

ಮಕ್ಕಳ ಲೈಂಗಿಕ ಕಿರುಕುಳವನ್ನು ಹೊರಹಾಕುವುದು ................................... ... 25 ...

ಮಕ್ಕಳ ಲೈಂಗಿಕ ಕಿರುಕುಳವನ್ನು ವರದಿ ಮಾಡುವುದು ................................ ... 27 ...

ಬಲಿಯಾದವರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವುದು ...................... ... 28 ...

ಮಕ್ಕಳ ಮೇಲ ಲೈಂಗಿಕ ಕಿರುಕುಳವಾಗಿದ್ದಲ್ಲಿ ಸಾಕ್ಷಿಗಳನ್ನು ಕಲೆಹಾಕುವುದು .... ... 30 ...

ಬಲಿಯಾದವರ ವೈದ್ಯಕೀಯ ಪರೀಕ್ಷೆ .................................................... ... 31 ...

ನ್ಯಾಯಾಲಯ ಪ್ರಕ್ರಿಯೆಗಳು ............................................................ ... 32 ...

ಕಿರುಕುಳಕ್ಕೆ ಬಲಿಯಾದ ನಂತರ ಬಲಿಯಾದವರ ನಿರ್ವಹಣೆ ...................... ... 33...

ಭಾಗೀದಾರರ ಪಾತ್ರ ...................................................................... ... 34 ...

ಪ್ರಕರಣ ಕಾಯಿದೆಗಳು ................................................................... ... 37 ...

ಉಲ್ಲೇಖಗಳು ............................................................................. ... 39 ...

# ದೇವದಾಸಿಯರ ಉಲ್ಲೇಖ

- "ನನ್ನನ್ನು ಆರ್ಥಿಕ ಲೈಂಗಿಕ ಶೋಷಣೆಯಿಂದ ರಕ್ಷಿಸಿದ ಪೋಲೀಸ್ ಮತ್ತು NGO ಗೆ ನಾನು ಆಭಾರಿಯಾಗಿದ್ದೇನೆ. ನನ್ನನ್ನು ರಕ್ಷಿಸದೇ ಇದ್ದಿದ್ದರೆ, ಸಮರ್ಪಣೆ ಮಾಡಿ ಆರ್ಥಿಕ ಲೈಂಗಿಕ ಶೋಷಣೆಗೆ ಗುರಿಯಾದ ನನ್ನ ಅಜ್ಜಿ, ತಾಯಿ, ಮತ್ತು ಚಿಕ್ಕಮ್ಮರಂತೆಯೇ ನನ್ನ ಪರಿಸ್ಥಿತಿಯು ಆಗಿರುತ್ತಿತ್ತು. ದುರ್ದೈವದಿಂದ್ ಅವರನ್ನು ರಕ್ಷಿಸಲು ಮತ್ತು ಪುನರ್ ವಸತಿ ಕಲ್ಪಿಸಲು ಆಗಲಿಲ್ಲ, ಮತ್ತುಅವರು ನಂತರ ನನ್ನನ್ನು ಸಮರ್ಪಣೆ ಮಾಡಿದರು ಮತ್ತು ನನ್ನನ್ನು ಆರ್ಥಿಕ ಲೈಂಗಿಕ ಚಟುವಟಿಕೆಗೆ ಮಾರಾಟ ಮಾಡಿದರು. ನನ್ನ ರಕ್ಷಣೆಯೊಂದಿಗೆ– ಹೆಣ್ಣು ಮಕ್ಕಳನ್ನು ಸಮರ್ಪಣೆ ಮಾಡುವುದು, ಅವರನ್ನು ಆರ್ಥಿಕ ಲೈಂಗಿಕ ಚಟುವಟಿಕೆಗಳಿಗಾಗಿ ಮಾರಾಟ ಮಾಡುವುದು ಮತ್ತು ಅವರ ದುಡಿಮೆಯ ಮೇಲೆ ಬದುಕುವುದು– ಇವು ನಿಂತು ಹೋಗಿವೆ."
- "ಹೆಣ್ಣು ಮಕ್ಕಳ ಮದುವೆಯನ್ನು ತಡೆಯಲು ಮತ್ತು ಅವರ ದುಡಿಮೆಯಿಂದ ಬದುಕಲು ಕುಟುಂಬದ ಸದಸ್ಯರಿಂದ ಸಮರ್ಪಣೆ ಎಂಬ ಅಸ್ತ್ರವನ್ನು ಬಳಸಲಾಗುತ್ತದೆ."
- "ಕುಟುಂಬ, ಜಾತಿ ಮತ್ತು ಸಮುದಾಯಗಳು ಹೆಣ್ಣು ಮಕ್ಕಳು ಮತ್ತು ಮಹಿಳೆಯರನ್ನು ಕಿರುಕುಳ ಮತ್ತು ಶೋಷಣೆಯಿಂದ ಸಂರಕ್ಷಿಸಬೇಕು. ಆದರೆ, ಅವರೇ ಶೋಷಕರಾದಾಗ, ಆ ಜವಾಬ್ದಾರಿ ಹೊರಗಿನ ಸಂಸ್ಥೆಗಳಿಗೆ ವಿಸ್ತರಣೆಯಾಗುತ್ತದೆ ಅವು ಮಧ್ಯಪ್ರವೇಶಿಸುತ್ತವೆ ಮತ್ತು ಹೆಣ್ಣು ಮಕ್ಕಳು ಮತ್ತು ಮಹಿಳೆಯರನ್ನು ಶೋಷಣೆಯಿಂದ ರಕ್ಷಿಸುತ್ತವೆ. ಇದಕ್ಕೆ ಸಂಬಂಧಿಸಿದಂತೆ, ಕಾನೂನು ಜಾರಿ ಸಂಸ್ಥೆಗಳು ಮತ್ತು NGO ಗಳು ಪ್ರಮುಖ್ ಪಾತ್ರ ವಹಿಸಬೇಕಾಗಿದೆ."
- "ಸಮರ್ಪಣಾ ಅಭ್ಯಾಸವನ್ನು, ಅದಕ್ಕೆ ಅನುಮತಿಸುವ, ನಡೆಸುವ ಮತ್ತು ಸಮರ್ಪಣಾ ಸಮಾರಂಭವನ್ನು ನಡೆಸುವ ನಡೆಸಲು ಉತ್ಸುಕವಾಗಿರುವವರನ್ನು ಶಿಕ್ಷಿಸದ ಹೊರತು ನಿರ್ಮೂಲನೆ ಮಾಡಲಾಗುವುದಿಲ್ಲ."

# ಮುನ್ನುಡಿ

ದೇವದಾಸಿ ಪದ್ಧತಿಯ ತಿರುಳೆಂದರೆ ಮಹಿಳೆಯರನ್ನು ಜಾತಿ, ವರ್ಗ ಮತ್ತು ಲಿಂಗದ ಆಧಾರದ ಮೇಲೆ ಶೋಷಣೆ ಮಾಡುವುದೆ ಆಗಿದೆ. ಬಹು ಸಂಖ್ಯೆಯ ಹೆಣ್ಣು ಮಕ್ಕಳನ್ನು ಸಮರ್ಪಣೆ ಮಾಡಲಾಗಿದ್ದು ಅವರು ಮಕ್ಕಳ ಲೈಂಗಿಕ ಕಿರುಕುಳದ ಬಲಿಪಶುಗಳಾಗಿದ್ದಾರೆ ಮತ್ತು ಆರ್ಥಿಕ ಲೈಂಗಿಕ ಶೋಷಣೆಗೆ ಒಳಗಾಗಿದ್ದಾರೆ.

ವಿಶೇಷ ಕರ್ನಾಟಕ ದೇವದಾಸಿ (ಸಮರ್ಪಣಾ ನಿಷೇಧ) ಕಾಯಿದೆ, 1982, ಯ ಮುಖ್ಯವಾದ ಉದ್ದೇಶವೆಂದರೆ ದೇವದಾಸಿ ಪದ್ಧತಿಯ ನಿರ್ಮೂಲನೆ, ಸೆಕ್ಷನ್ 5 ರಡಿಯಲ್ಲಿ "ಹೆಣ್ಣು ಮಕ್ಕಳ ಸಮರ್ಪಿತ" ರಿಗೆ ಶಿಕ್ಷೆಯನ್ನು ನೀಡಬಹುದಾಗಿದೆ, ಹಾಗಾಗಿ ಮತ್ತಷ್ಟು ಬಲಿಪಶು ಮಾಡುವುದು "ಬಲಿಯಾದವರು" ಮತ್ತು ಆಕೆಯನ್ನು ಸಮರ್ಪಣೆ ಮಾಡಿದ್ದರೆ ಆಕೆಯನ್ನು ಸಕ್ರಿಯ ಕ್ರಿಮಿನಲ್ ನ್ಯಾಯ ಪದ್ಧತಿಯಿಂದ ತಡೆಯುವುದು.

WeWorld ಬೆಂಬಲಿತವಾದ ಮತ್ತು ಸೆಂಟರ್ ಫಾರ್ ಚೈಲ್ಡ್ ಅಂಡ್ ಲಾ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ಬೆಂಗಳೂರು, ಇವರಿಂದ ಸ್ಥಾಪಿತ ಸಂಶೋಧನೆಯ ಅಧ್ಯಯನವು 2018 ರಲ್ಲಿ ಖಚಿತಪಡಿಸಿರುವಂತೆ ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿ ಸಮಾಜೋ ಆರ್ಥಿಕ ಹಿಂದುಳಿದ ಸಮುದಾಯದ ಹೆಣ್ಣು ಮಕ್ಕಳು ಇನ್ನೂ ಕೂಡ ದೇವದಾಸಿ ಪದ್ಧತಿಯನ್ನು ಅನುಸರಿಸುವ ಅರಕೆಯನ್ನು ಕಟ್ಟಿಕೊಳ್ಳುತ್ತಿರುವುದು ಕಂಡುಬಂದಿದೆ. ಆದಾಗ್ಯೂ 2011 ರಿಂದ ಬಳ್ಳಾರಿ ಜಿಲ್ಲೆಯಲ್ಲಿ ಕರ್ನಾಟಕ ದೇವದಾಸಿ (ಸಮರ್ಪಣೆ ನಿಷೇಧ) ಕಾಯಿದೆ 1982 ಮತ್ತು KDPD ತಿದ್ದುಪಡಿ ಕಾಯಿದೆ 2010 ರ ಅಡಿಯಲ್ಲಿ ಒಂದೇ ಒಂದು ಪ್ರಕರಣವೂ ದಾಖಲಾಗಿಲ್ಲ ಅಥವಾ 2012 ರ POCSO ಕಾಯಿದೆಯಡಿಯಲ್ಲೂ ಸಹ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ಸಮರ್ಪಣೆಯ ಅಥವಾ ಸಂಬಂಧಿಸಿದ ಲೈಂಗಿಕ ದೌರ್ಜನ್ಯದ ಒಂದೇ ಒಂದು ಪ್ರಕರಣ ಕೂಡ ದಾಖಲಾಗಿರುವುದಿಲ್ಲ.

ಸಂಶೋಧನೆಯ ಅಧ್ಯಯನಗಳು ಹೇಳುವಂತೆ ದೇವದಾಸಿ ಪದ್ಧತಿಯ ಮುಂದುವರಿಕೆ ಮತ್ತು ಪ್ರಕರಣಗಳು ದಾಖಲಾಗದೇ ಇರುವುದಕ್ಕೆ ಅನೇಕ ರೀತಿ ಕಾರಣಗಳಿವೆ.

**ಕೆಲವು ಕಾರಣಗಳೆಂದರೆ–**

- ಸೇವೆ ಒದಗಿಸುವವರು KDPD ಕಾಯ್ದೆಯಲ್ಲಿನಿಬಂಧನೆಗಳನ್ನು ಅರ್ಥ ಮಾಡಿಕೊಂಡಿಲ್ಲ ಅಥವಾ POCSO ಕಾಯಿದೆ, JJ ಕಾಯಿದೆ ಅಥವಾ ಸಮರ್ಪಣೆ ಪ್ರಕರಣಗಳ ವಿಷಯದಲ್ಲಿ IPC ಯನ್ನು ಹೇಗೆ ಬಳಸಬೇಕೆಂಬ ತಿಳುವಳಿಕೆ ಇಲ್ಲದಿರುವುದು.

- ಕಾನೂನು ಜಾರಿ ಸಂಸ್ಥೆಗಳು KDPD ಕಾಯ್ದೆಗಳ ನಿಬಂಧನೆಗಳನ್ನು ಸರಿಯಾಗಿ ತಿಳಿದುಕೊಂಡಿಲ್ಲ. ಅವು ಸಮರ್ಪಣೆ, ಮಕ್ಕಳ ಲೈಂಗಿಕ ಕಿರುಕುಳ (CSA) ಮತ್ತು ಆರ್ಥಿಕವಾಗಿ ಲೈಂಗಿಕ ಶೋಷಣೆ

(CSE) ಗಳ ನಡುವೆ ಸಂಪರ್ಕ ಮಾಡಲು ವಿಫಲರಾಗಿರುವುದು.

- ವಿವಿಧ ಕಾನೂನುಗಳಿಡಿಯಲ್ಲಿ ಅನೇಕ ನಿಬಂಧನೆಗಳಿದ್ದು (POCSO, ITPA, JJ ಕಾಯಿದೆ, IPC) ಅವು ಹೆಣ್ಣು ಮಗುವನ್ನು ಸಮರ್ಪಣೆ ಮಾಡುವ ಪ್ರಕರಣಗಳಲ್ಲಿ ಸೂಕ್ತವಾಗುತ್ತವೆ. ಆದರೂ, ಈ ಎಲ್ಲಾ ಕಾನೂನುಗಳನ್ನು ಸಮರ್ಪಕವಾಗಿ ಬಳಸಲಾಗಿಲ್ಲ ಮತ್ತು ಅನುಷ್ಠಾನಗೊಳಿಸಲಾಗಿಲ್ಲ.

ಸಂಶೋಧನಾ ಅಧ್ಯನದಲ್ಲಿ ಎತ್ತಿಹಿಡಿಯಲ್ಪಟ್ಟ ಸವಾಲುಗಳು ಮತ್ತು ಅಂತರಗಳನ್ನು ನಿವಾರಿಸಬಹುದಾದ ಒಂದೇ ಮಾರ್ಗವೆಂದರೆ ಕಾನೂನು ಜಾರಿ ಸಂಸ್ಥೆಗಳ ಸದಸ್ಯರ ಮತ್ತು ಸೇವೆ ಒದಗಿಸುವವರಿಗೆ ವಿವಿಧ ರಾಜ್ಯಗಳು ಮತ್ತು ರಾಷ್ಟ್ರೀಯ ಕಾನೂನುಗಳಲ್ಲಿ ಇರುವಂತಹ ಕಾನೂನಾತ್ಮಕ ನಿಬಂಧನೆಗಳು, ಕಾನೂನುಗಳು, ಮತ್ತು ಪ್ರಕ್ರಿಯೆಗಳ ತಿಳುವಳಿಕೆ ಮತ್ತು ಕೌಶಲ್ಯಗಳನ್ನು ಹೆಚ್ಚಿಸುವುದು.

ದೇವದಾಸಿ ಪದ್ದತಿಯ ವಿರುದ್ಧ ಹೋರಾಡುವುದು ಎಂಬ ಈ ಕೈಪಿಡಿಯು ಕಾನೂನು ಜಾರಿ ಸಂಸ್ಥೆಗಳು ಮತ್ತು ಸೇವೆ ಒದಗಿಸುವವರಿಗೆ ಕಾನೂನುಗಳನ್ನು ಸುಲಭವಾಗಿ ನೋಡಲು ಒಂದು ಸಂಗ್ರಹಿತ ಕೈಪಿಡಿಯಾಗಿಸಿರುವ ಒಂದು ಪ್ರಯತ್ನ ಇದಾಗಿದೆ, ಎಲ್ಲಾ ಪ್ರಮುಖ ಕಾನೂನು ನಿಯಮಗಳು ಮತ್ತು ಮಕ್ಕಳ ಲೈಂಗಿಕ ಕಿರುಕುಳಕ್ಕೆ ಬಲಿಯಾದವರನ್ನು ನಿರ್ವಹಿಸುವುದರ ಬಗೆಗಿನ ಮಾಹಿತಿಗಳನ್ನು ಇದು ಒಳಗೊಂಡಿದೆ.

ಈ ಕೈಪಿಡಿಯು ಕಾನೂನು ಜಾರಿ ಸಂಸ್ಥೆಗಳು ಮತ್ತು ಸೇವೆ ಒದಗಿಸುವವರಾದ ಪೋಲೀಸರು, ಮ್ಯಾಜಿಸ್ಟ್ರೇಟರು, CWC, NGOಗಳು ಇತ್ಯಾದಿಗಳಿಗೆ ಹೆಣ್ಣು ಮಕ್ಕಳು ಮತ್ತು ಮಹಿಳೆಯರನ್ನು ದೇವದಾಸಿಯರಾಗಿ ಸಮರ್ಪಣೆ ಮಾಡುವುದರಿಂದ ಆ ನಂತರದಲ್ಲಿ ಅವರನ್ನು ರಕ್ಷಿಸಲು ಮತ್ತು ಅವರ ಲೈಂಗಿಕ ಕಿರುಕುಳ ಮತ್ತು ಶೋಷಣೆಯನ್ನು ತಪ್ಪಿಸಲು ಉಪಯುಕ್ತವಾಗುತ್ತದೆ ಎಂದು ನನಗೆ ಭರವಸೆ ಇದೆ.

ಈ ಕೈಪಿಡಿಯನ್ನು ಹೊರತರಲು ಸಹಾಯ ಮಾಡಿದ WeWorld ಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ.

ನಾನು ಈ ಕೈಪಿಡಿಯನ್ನು ಸಮರ್ಪಣೆಯನ್ನು ತಡೆಯಲು, ಸಂರಕ್ಷಣೆ ಮಾಡಲು, ಮತ್ತು ದೇವದಾಸಿಯರಿಗೆ ಪುನರ್ ವಸತಿ ಕಲ್ಪಿಸಲು ಪ್ರಾಮಾಣಿಕವಾಗಿ ತೊಡಗಿಸಿಕೊಂಡಿರುವ ಕಾನೂನು ಜಾರಿ ಸಂಸ್ಥೆಗಳು ಮತ್ತು ಸೇವಾ ಪೂರೈಕೆದಾರರಿಗೆ ಅರ್ಪಣೆ ಮಾಡುತ್ತೇನೆ.

ಅರುಣೇಂದ್ರ ಪಾಂಡೆ

ನಿರ್ದೇಶಕರು,

**Arz (ಅನನ್ಯ ರಹಿತ್ ಜಿಂದಗಿ)**

# ದೇವದಾಸಿ ಪದ್ಧತಿಯ ಬಗ್ಗೆ

## ಹಿನ್ನೆಲೆ

'ದೇವದಾಸಿ' – ಯ ಅರ್ಥ ದೇವರ ಮಹಿಳಾ ದಾಸಿ (ದೇವ ಎಂದರೆ ದೇವರು ಎಂದರ್ಥ ಮತ್ತು ದಾಸಿ ಎಂದರೆ ಮಹಿಳಾ ದಾಸಿ ಎಂದು). ದೇವರಿಗೆ ಬಿಟ್ಟ ಮಹಿಳೆಯರನ್ನು ಧಾರ್ಮಿಕವಾಗಿ ಇತರೆ ಹೆಸರುಗಳಿಂದಲೂ ಕರೆಯಲಾಗುತ್ತದೆ ಅವುಗಳೆಂದರೆ, ಬಸವಿ, ಜೋಗಿನಿ, ಇತ್ಯಾದಿ,. ಸಮರ್ಪಣೆ ಮಾಡುವಿಕೆಯನ್ನು ಸಾಮಾನ್ಯವಾಗಿ ಅವರು ಹುಡುಗಿಯಾಗಿದ್ದಾಗ ಅಥವ ಹದಿಹರೆಯದಲ್ಲಿ ಮಾಡಲಾಗುತ್ತದೆ. ಅವರನ್ನು ದೇವ ದಾಸಿಯಾಗಿ ಬಿಟ್ಟಮೇಲೆ, ಈ ಹುಡುಗಿಯರು ಮದುವೆಯಾಗುವಂತಿಲ್ಲ, ಮತ್ತು ಅವರ ಸಮರ್ಪಣೆಯನ್ನು ಮಾರ್ಪಾಡು ಮಾಡುವಂತಿಲ್ಲ.

'ದೇವ ದಾಸಿ' ಯರು ಸೈದ್ಧಾಂತಿಕವಾಗಿ ಮದುವೆಯಾದ ಅಥವಾ ಮದುವೆಯಾಗದ ಗಂಡಸರನ್ನು ಸಂಗಾತಿಯಾಗಿ ಆಯ್ಕೆ ಮಾಡಿಕೊಳ್ಳಲು ಮುಕ್ತವಾಗಿರುತ್ತಾರೆ. ಆದರೂ, ಅವರು ಲೈಂಗಿಕ ಸೇವಕರಿಗಿಂತ ಹೆಚ್ಚಿನವರಲ್ಲ. ಈಗ ಈ ಪದ್ಧತಿಯು ಬಳ್ಳಾರಿ, ರಾಯಚೂರು, ಗದಗ್, ಗುಲ್ಬರ್ಗಾ, ರಾಯಚೂರು, ಹಾವೇರಿ, ಮತ್ತು ಧಾರವಾಡ ಗಳಲ್ಲಿ ಅಸ್ತಿತ್ವದಲ್ಲಿದೆ– ಅಂದರೆ ಇಡೀ ಉತ್ತರ ಕರ್ನಾಟಕ. ಹೆಚ್ಚಿನ ಈ ಪ್ರದೇಶಗಳು ಬರಗಾಲ ಪೀಡಿತ ಪ್ರದೇಶಗಳಾಗಿವೆ, ಗ್ರಾಮಗಳು ಪ್ರತ್ಯೇಕವಾಗಿರುತ್ತವೆ, ಮತ್ತು ಆರ್ಥಿಕ ಅವಕಾಶಗಳು ಮತ್ತು ಸಾಕ್ಷರತೆಯ ಮಟ್ಟ ಕೆಳಗಿರುತ್ತದೆ.

ದೇವದಾಸಿ ಪದ್ಧತಿಯು ಭಾರತೀಯ ಸಂವಿಧಾನದ ಕಾನೂನುಗಳ ಪ್ರಕಾರ ವಿರುದ್ಧವಾಗಿವೆ. ಕರ್ನಾಟಕದಲ್ಲಿ, ಯಾವುದೇ ಹೆಣ್ಣು ಮಗು ಅಥವಾ ಮಹಿಳೆಯನ್ನು ರಾಜ್ಯದಲ್ಲಿ ಸಮರ್ಪಣೆ ಮಾಡುವುದು ಕಾನೂನು ಬಾಹಿರ ಎಂಬ ಕಾನೂನುಗಳಿವೆ [ಕರ್ನಾಟಕ ದೇವದಾಸಿ (ಸಮರ್ಪಣಾ ನಿಷೇಧ) ಕಾಯಿದೆ, 1982, ಮತ್ತು ತಿದ್ದುಪಡಿ ಕಾಯಿದೆ 2010 – KDPD ಕಾಯಿದೆ]

KDPD ಕಾಯಿದೆಯಿಂದ ಕರ್ನಾಟಕದಲ್ಲಿ ವ್ಯಾಪಕವಾಗಿ ದೇವದಾಸಿ ಪದ್ಧತಿಯನ್ನು ತೊಡೆದು ಹಾಕಲು ಸಾಧ್ಯವಾಗಿಲ್ಲ. ಉತ್ತರ ಕರ್ನಾಟಕದ ಅನೇಕ ತಾಲ್ಲೋಕುಗಳಲ್ಲಿ ಹೆಣ್ಣು ಮಕ್ಕಳನ್ನು ನಿರಂತರವಾಗಿ ಸಮರ್ಪಣೆ ಮಾಡಲಾಗುತ್ತಿದೆ.

ನ್ಯಾಯಮೂರ್ತಿ ಮದನ್ B ಲೋಕುರ್ ಮತ್ತು U U ಲಲಿತ್ (ಸುಪ್ರೀಂ ಕೋರ್ಟ್ ನ್ ಸಾಮಾಜಿಕ ನ್ಯಾಯದ ಬೆಂಚ್) ಇವರು ದೇವದಾಸಿ ಪದ್ಧತಿಯ ಮೇಲಿನ PIL ಹಿಯರಿಂಗ್ ನಲ್ಲಿ ಗಮನಿಸಿದಂತೆ "ದೇವದಾಸಿ ಪದ್ಧತಿಯು ಒಂದು ರಾಷ್ಟ್ರೀಯ ಅಪಮಾನವಾಗಿದೆ ಮತ್ತು ದೇವದಾಸಿ ಪದ್ಧತಿಯನ್ನು ನಿಲ್ಲಿಸಬೇಕಾಗಿದೆ" ಎಂದಿದ್ದಾರೆ.

## ದೇವದಾಸಿ ಪದ್ಧತಿಯ ಬಗೆಗಿನ ಕಟ್ಟುಕಥೆಗಳು ಮತ್ತು ವಾಸ್ತವಾಂಶಗಳು:

**ಕಟ್ಟುಕಥೆ: ಅದೊಂದು ಧಾರ್ಮಿಕ ಪದ್ಧತಿಯಾಗಿದ್ದು ಆದ್ದರಿಂದ ಅದನ್ನು ಮುಂದುವರಿಸಬೇಕು.**

**ವಾಸ್ತವಾಂಶ:** ಪದ್ಧತಿಯು ಮಹಿಳೆಯರ ಮತ್ತು ಮಕ್ಕಳ ಶೋಷಣೆಗೆ ಕಾರಣವಾಗುತ್ತದೆ ಇದು ಭಾರತೀಯ ಸಂವಿಧಾನಕ್ಕೆ ವಿರುದ್ಧವಾದುದು.

**ಕಟ್ಟುಕಥೆ: ಎಲ್ಲಾ ದೇವದಾಸಿಯರೂ ವೇಶ್ಯಾವಾಟಿಕೆಗೆ ಇಳಿಯುವುದಿಲ್ಲ.**

**ವಾಸ್ತವ:** ಹೆಚ್ಚಿನ ಮೀಸಲಾದ ಹುಡುಗಿಯರು ಮಕ್ಕಳ ಲೈಂಗಿಕ ಕಿರುಕುಳ ಮತ್ತು ಲೈಂಗಿಕ ಕಳ್ಳಸಾಗಾಣಿಕೆಯ ಬಲಿಪಶುಗಳಾಗುತ್ತಾರೆ.

**ಕಟ್ಟು ಕಥೆ: ಅದೊಂದು ಧಾರ್ಮಿಕ ವಿಷಯ ಆದ್ದರಿಂದ ಕಾನೂನು ಜಾರಿ ಸಂಸ್ಥೆಗಳು ಅದರಲ್ಲಿ ಭಾಗಿಯಾಗುವಂತಿಲ್ಲ.**

**ವಾಸ್ತವ:** ಮಗುವೊಂದನ್ನು ಮೀಸಲಾಗಿಸುವುದು ಮತ್ತು ಆಕೆಯನ್ನು ಲೈಂಗಿಕ್ ಉದ್ದೇಶಕ್ಕಾಗಿ ಮಾರಾಟ ಮಾಡುವುದು ಮಕ್ಕಳ ಹಕ್ಕುಗಳ ಗಂಭೀರ ಉಲ್ಲಂಘನೆಯಾಗಿದೆ. ಭಾರತೀಯ ಕಾನೂನಿಡಿಯಲ್ಲಿ, ಈ ಕಾಯಿದೆಗಳನ್ನು ಗಂಭೀರ ಅಪರಾಧಗಳಾಗಿವೆ. ಕಾನೂನು ಜಾರಿ ಸಂಸ್ಥೆಗಳು ಈ ಮೀಸಲಿರಿಸುವಿಕೆ ಮತ್ತು ಲೈಂಗಿಕ ಶೋಷಣೆಯಲ್ಲಿ ಭಾಗಿಯಾಗುವವರ ವಿರುದ್ಧ ಕಾನೂನು ಕ್ರಮಜರುಗಿಸುವುದು ಅವರ ಕರ್ತವ್ಯವಾಗಿರುತ್ತದೆ.

**ಕಟ್ಟು ಕಥೆ: ಇದು ಹೆಣ್ಣು ಮಗು ಮತ್ತು ಕುಟುಂಬದ ಹಿತಾಸಕ್ತಿಯಾಗಿರುತ್ತದೆ.**

**ವಾಸ್ತವ:** ಮೀಸಲಿರಿಸುವಿಕೆ, ಆಕೆಯನ್ನು ಮದುವೆಯಾಗುವುದರಿಂದ ತಡೆಯುವುದು, ಲೈಂಗಿಕ ಕಿರುಕುಳ, ಮತ್ತು ಹಣಕ್ಕಾಗಿ ಲೈಂಗಿಕ ಶೋಷಣೆಗಳು ಹೆಣ್ಣು ಮಗುವಿನ ಹಿತಾಸಕ್ತಿಯಾಗಲಾರದು. ಅವರು ಹೆಣ್ಣು ಮಗುವನ್ನು ಮಾರಾಟ ಮಾಡುವುದರಿಂದ ಜೀವನ ಮಾಡುತ್ತಿದ್ದರೆ ಅದು ಕುಟುಂಬದ ಹಿತಾಸಕ್ತಿಯಾಗಿರಬಹುದು. ಆದರೆ ಹುಡುಗಿಯು ಆಕೆ ದೈಹಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಲಿಯಾಗುತ್ತಾಳೆ.

**ಕಟ್ಟುಕಥೆ: ದೇವದಾಸಿಯರು ಮದುವೆಯಾಗಬಾರದೇ?**

**ವಾಸ್ತವ:** ಕಾನೂನು ದೇವದಾಸಿಯರು ಮದುವೆಯಾಗಲು ಅವಕಾಶ ನೀಡುತ್ತದೆ ಮತ್ತು ದೇವದಾಸಿಯು ಮದುವೆಯಾಗುವುದನ್ನು ತಡೆಯುವವರು ಅಪರಾಧ ಮಾಡಿದಂತೆ. ದೇವದಾಸಿಯೊಬ್ಬಳ ಮದುವೆ ಅಮಾನ್ಯವಲ್ಲ ಮತ್ತು ಇಂತಹ ಯಾವುದೇ ಮದುವೆಯ ಸಮಸ್ಯೆಯು ಕಾನೂನು ಬಾಹಿರವೆಂದು ಪರಿಗಣಿಸಲಾಗುವುದಿಲ್ಲ.

**ಕಟ್ಟುಕಥೆ: ದೇವದಾಸಿ ಪದ್ಧತಿಗೆ ಬಡತನ ಕಾರಣವೇ.**

**ವಾಸ್ತವ:** ಕರ್ನಾಟಕದಲ್ಲಿ, ದಲಿತ ಜಾತಿಯವರಲ್ಲದ ಬಡತನದ ಕುಟುಂಬಗಳಲ್ಲಿ ಹೆಣ್ಣು ಮಕ್ಕಳಿದ್ದಾರೆ. ಈ ಜಾತಿಗಳ ಹುಡುಗಿಯರನ್ನೇಕೆ ಮೀಸಲಾಗಿರಿಸಲಾಗುವುದಿಲ್ಲ? ದೇವದಾಸಿ ಪದ್ಧತಿಯು ಕೆಳಜಾತಿಯ ಹೆಣ್ಣು ಮಕ್ಕಳ ಮತ್ತು ಮಹಿಳೆಯರ ಲೈಂಗಿಕ ಶೋಷಣೆಯೇ ಹೊರತು ಬೇರೇನೂ ಅಲ್ಲ.

# ದಮನಿತ (ದಲಿತ) ಜನಾಂಗದ ಹುಡುಗಿಯರು

**ದೇವದಾಸಿಯರನ್ನಾಗಿ ಮೀಸಲಿರಿಸುವುದಕ್ಕೆ ನಿರ್ಧಿಷ್ಟ ಅಪಾಯದಲ್ಲಿರುವ ಹುಡುಗಿಯರೆಂದರೆ:**

- ದಲಿತ ಸಮುದಾಯದ ಹುಡುಗಿಯರು
- ದೇವದಾಸಿ ಕುಟುಂಬದ ಹುಡುಗಿಯರು
- ದೈಹಿಕವಾಗಿ ಅಂಗವಿಕಲರಾಗಿರುವ ಹುಡುಗಿಯರು
- ಹೆಣ್ಣು ಅವಳಿಯನ್ನು ಹೊಂದಿರುವ ಹೆಣ್ಣು ಮಕ್ಕಳು ಮಾತ್ರ ಅಂದರೆ ಗಂಡು ಮಕ್ಕಳಿಲ್ಲದ ಹೆತ್ತವರು
- ಮೀಸಲಿರಿಸುವಿಕೆಯಲ್ಲಿ ಭಾಗಿಯಾಗುವವರ ವಿರುದ್ಧ ಕ್ರಮತೆಗೆದುಕೊಂಡು ಕಾನೂನು ಜಾರಿ ಮಾಡುವ ಸಂಸ್ಥೆಗಳು ವಿಫಲಾವಾಗಿರುವ ಭೌಗೋಳಿಕ ಪ್ರದೇಶದ ಹೆಣ್ಣು ಮಕ್ಕಳು
- ಮೂಢ ನಂಬಿಕೆಗಳು ಇನ್ನೂ ಅಸ್ತಿತ್ವದಲ್ಲಿರುವ ಭೌಗೋಳಿಕ ಪ್ರದೇಶಗಳ ಹೆಣ್ಣು ಮಕ್ಕಳು



# ಒಂದು ಹುಡುಗಿ ಅಥವಾ ಮಹಿಳೆ ಮೀಸಲಾದರೆ:

ಕರ್ನಾಟಕದಲ್ಲಿ, ಹೆಣ್ಣು ಮಕ್ಕಳನ್ನು ಮತ್ತು ಮಹಿಳೆಯರನ್ನು ರಾಜ್ಯದಲ್ಲಿ ದೇವರಿಗೆ ಮೀಸಲಿರಿಸುವುದನ್ನು ಕಾನೂನುಬಾಹಿರವೆನ್ನುವ ನಿರ್ದಿಷ್ಟವಾದ ಕಾನೂನು ಇದೆ [ಕರ್ನಾಟಕ ದೇವದಾಸಿ (ಮೀಸಲಿರಿಸುವಿಕೆ ನಿಷೇಧ) ಕಾಯಿದೆ 1982 ಮತ್ತು ತಿದ್ದುಪಡಿ ಕಾಯಿದೆ 2010–KDPD ಕಾಯಿದೆ]

**1982 ರ [ಕರ್ನಾಟಕ ದೇವದಾಸಿ (ಮೀಸಲಿರಿಸುವಿಕೆ ನಿಷೇಧ) ಕಾಯಿದೆಯ ಪ್ರಕಾರ ವ್ಯಾಖ್ಯಾನಗಳು:**

- 2 (a) "ಮೀಸಲಿರಿಸುವಿಕೆ" ಯ ಅರ್ಥವೆಂದರೆ ಮಹಿಳೆಯರನ್ನು ಯಾವುದೇ ವಿಗ್ರಹ, ದೇವತೆ, ಪೂಜಿಸುವ ವಸ್ತು, ದೇವಾಲಯ, ಇತರೆ ಧಾರ್ಮಿಕ ಸಂಸ್ಥೆಗಳು ಅಥವಾ ಪೂಜಾ ಸ್ಥಳಗಳಲ್ಲಿ ಮಾಡಲಾಗುವ ಯಾವುದೇ ಕ್ರಿಯೆ ಅಥವಾ ಸಮಾರಂಭ ಅಥವಾ ಯವುದೇ ಹೆಸರಿನಿಂದ ಕರೆಯಲ್ಪಡುವ ಕ್ರಮಗಳು;
- 2 (b) "ದೇವದಾಸಿ" ಅರ್ಥವೆಂದರೆ ಹಾಗೆ ಮೀಸಲು ಮಾಡಲ್ಪಟ್ಟ ಮಹಿಳೆ;
- 2 (d) "ಮಹಿಳೆ" ಅರ್ಥವೆಂದರೆ ಯಾವುದೇ ವಯಸ್ಸಿನ ಮಹಿಳೆ.

## ಕರ್ನಾಟಕ ದೇವದಾಸಿ (ಮೀಸಲಿರಿಸುವಿಕೆ ನಿಷೇಧ) ಕಾಯಿದೆ, 1982

**ಸೆಕ್ಷನ್ 5:** ಯಾವುದೇ ವ್ಯಕ್ತಿ, ಮಹಿಳೆಯನ್ನು ಮೀಸಲಿರಿಸುವ ಕೆಲಸ ಮಾಡುವ, ಅದಕ್ಕೆ ಅನುಮತಿಸುವ, ಅದರಲ್ಲಿ ಭಾಗವಹಿಸುವ ಅಥವಾ ಯಾವುದೇ ರೀತಿಯ ಸಮಾರಂಭವನ್ನು ಏರ್ಪಡಿಸುವ ಅಥವಾ ಮಹಿಳೆಯೊಬ್ಬಳನ್ನು ದೇವದಾಸಿಯಾಗಿ ಮೀಸಲಿರಿಸುವ ಕೆಲಸ ಮಾಡುವ ಕೆಲಸವವರು ಅಪರಾಧ ಮಾಡಿದ್ದಾರೆಂದು ಪರಿಗಣಿಸಲಾಗುತ್ತದೆ.

**ವಿವರಣೆ:** ಈ ಸೆಕ್ಷನ್ ನಲ್ಲಿ ಉಲ್ಲೇಖಿಸಿರುವಂತೆ ವ್ಯಕ್ತಿಯೊಬ್ಬರು ಮಹಿಳೆಯನ್ನು ಒಳಗೊಂಡಂತೆ ಇಂತಹ ಸಮಾರಂಬ ಅಥವಾ ಕೆಲಸವನ್ನು ಮಾಡುವವರು.

# ಪರಿಶಿಷ್ಟಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆ, 1989

**ಸೆಕ್ಷನ್ 3 (1):** ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರದ ಯಾರೇ ಆಗಿರಲಿ – (k) ಮಾಡುವವರು ಅಥವಾ ಪರಿಶಿಷ್ಟಜಾತಿ ಅಥವಾ ಪರಿಶಿಷ್ಟ ಪಂಗಡದ ಮಹಿಳೆಯರನ್ನು ದೇವರಿಗೆ, ವಿಗ್ರಹಕೆಕ್, ಪೂಜಿಸುವ ವಸ್ತುವಿಕೆ, ದೇವಾಲಯಕ್ಕೆ, ಅಥವಾ ಬೇರೆ ಯಾವುದೇ ಧಾರ್ಮಿಕ್ ಸಂಸ್ಥೆಗಳಿಗೆ ದೇವದಾಸಿಯಾಗಿಸುವುದು ಅಥವಾ ಇತರೆ ಅದೇ ರೀತಿಯ ಪದ್ದತಿ ಮಾಡುವುದು ಅಥವಾ ಅದಕ್ಕೆ ಸಂಬಂಧಿಸಿದ ಮೇಲ್ಕಾಣಿಸಿದ ಕ್ರಿಯೆಗಳಿಗೆ ಅನುಮತಿಸುವುದು.

# ಹೆಣ್ಣು ಮಗು (ಅಪ್ರಾಪ್ತ ವಯಸ್ಕ) ಒಂದನ್ನು ಮೀಸಲಿರಿಸುವುದು ಮತ್ತು ಲೈಂಗಿಕವಾಗಿ ಕಿರುಕುಳ ನೀಡುವುದು

ಸೆಂಟರ್ ಫಾರ್ ಚೈಲ್ಡ್ ಅಂಡ್ ದಿ ಲಾ ದಿಂದ ಮಾಡಲಾದ ಅಧ್ಯಯನದಂತೆ, ನ್ಯಾಷನಲ್ ಸ್ಕೂಲ್ ಆಫ್ ಇಂಡಿಯನ್ ಯೂನಿವರ್ಸಿಟಿ ಶೀರ್ಷಿಕೆ, 2018 ರಲ್ಲಿ "ಕರ್ನಾಟಕದ ಬಳ್ಳಾರಿಯಲ್ಲಿ, 'ದೇವದಾಸಿ' ಬಿಡುವ ವಿದ್ಯಮಾನದ ಗುಣಾತ್ಮಕ ಕಾನೂನು ಆಯಾಮ", "ಮೀಸಲಿರಿಸಿದ ನಂತರ ಮಕ್ಕಳು ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಾರೆ".

ಮೀಸಲಿರಿಸಿದ ಮಗುವೊಂದನ್ನು ಲೈಂಗಿಕವಾಗಿ ಬಳಕೆ ಮಾಡಿಕೊಂಡಿರುವ ಪ್ರಕರಣಗಳ ಅಪರಾಧವನ್ನು ಲೈಂಗಿಕ ಅಪರಾಧಗಳಿಂದ ಮಗುವಿನ ರಕ್ಷಣೆ ಕಾಯಿದೆ 2012 (POCSO) ಅಡಿಯಲ್ಲಿ ಮತ್ತು ಇತರೆ ಸೂಕ್ತ ಕಾನೂನುಗಳಡಿಯಲ್ಲಿ ದಾಖಲಿಸಿಕೊಳ್ಳಬೇಕು.

## POCSO, 2012 ಅಡಿಯಲ್ಲಿನ ಅಪರಾಧಗಳು

**ಸೆಕ್ಷನ್ 4:** ರಕ್ಷಣಾತ್ಮಕ ಲೈಂಗಿಕ ಹಿಂಸೆ.

**ಸೆಕ್ಷನ್ 6:** ಆಕ್ರಮಣಕಾರಿ ಒಳನುಗ್ಗಿಸುವ ಲೈಂಗಿಕ ಹಿಂಸೆ.

**ಸೆಕ್ಷನ್ 8:** ಲೈಂಗಿಕ ಹಿಂಸೆ.

**ಸೆಕ್ಷನ್ 10:** ಆಕ್ರಮಣಕಾರಿ ಲೈಂಗಿಕ ಹಿಂಸೆ.

**ಸೆಕ್ಷನ್ 12:** ಲೈಂಗಿಕ ಕಿರುಕುಳ.

**ಸೆಕ್ಷನ್ 17:** ಅಪರಾಧಕ್ಕೆ ಕುಮ್ಮಕ್ಕು ನೀಡುವುದು.

# ಒಂದು ಹೆಣ್ಣು ಮಗು ಅಥವಾ ಮಹಿಳೆಯನ್ನು ಮೀಸಲಿರಿಸಿದರೆ ಮತ್ತು ಹಣಕ್ಕಾಗಿ ಲೈಂಗಿಕವಾಗಿ ಶೋಷಣೆ ಮಾಡಿದರೆ

ಮೀಸಲಿರಿಸಲ್ಪಟ್ಟ ಹೆಚ್ಚಿನ ಸಂಖ್ಯೆಯ ಹೆಣ್ಣು ಮಕ್ಕಳನ್ನು ಆರ್ಥಿಕ ಲೈಂಗಿಕ ಶೋಷಣೆಗಾಗಿ ಕಳ್ಳಸಾಗಣೆ ಮಾಡಲಾಗುತ್ತದೆ. ಅನೇಕ ಪ್ರಕರಣಗಳಲ್ಲಿ, ಕುಟುಂಬದ ಸದಸ್ಯರೇ ವೇಶ್ಯಾವಾಟಿಕೆಗಳಿಗೆ/ಕಳ್ಳಸಾಗಾಣಿಕೆದಾರರಿಗೆ ಮಾರಾಟ ಪಾಲ್ಗೊಂಡಿರುತ್ತಾರೆ ಮತ್ತುಅವರ ದುಡಿಮೆಯಿಂದ ಜೀವನ ನಿರ್ವಹಣೆ ಮಾಡುತ್ತಾರೆ.

ಹೆಣ್ಣು ಮಕ್ಕಳು ಅಥವಾ ಮಹಿಳೆಯರನ್ನು ಮೀಸಲಿರಿಸಿದಾಗ ಅವರು ಲೈಂಗಿಕವಾಗಿ ಶೋಷಿಸಲ್ಪಡುತ್ತಾರೆ, ಈ ಅಪರಾಧವನ್ನು ಅನೈತಿಕ ಕಳ್ಳಸಾಗಾಣಿಕೆ ತಡೆ ಕಾಯಿದೆ 1956 ಸೂಕ್ತವಾದ ಸೆಕ್ಷನ್ ಅಡಿಯಲ್ಲಿ ಮತ್ತು ಇತರೆ ಕಾನೂನುಗಳಡಿಯಲ್ಲಿ ದಾಖಲಿಸಬೇಕು.

## ಅನೈತಿಕ ಕಳ್ಳಸಾಗಾಣಿಕೆ ತಡೆ ಕಾಯಿದೆ 1956 {ITPA}

**ITPA ನ ಸೆಕ್ಷನ್ 3:** ವೇಶ್ಯಾವಾಟಿಕೆಯನ್ನು ಇರಿಸಿಕೊಳ್ಳುವುದು ಅಥವಾ ನಿರ್ವಹಣೆ ಮಾಡುವುದು ಅಥವಾ ವೇಶ್ಯವಾಟಿಕೆಯನ್ನು ನಡೆಸಲು ಸ್ಥಳಾವಕಾಶ ಮಾಡಿಕೊಡುವುದು.

**ITPA ನ ಸೆಕ್ಷನ್ 4:** ವೇಶ್ಯಾವಾಟಿಕೆಯ ದುಡಿಮೆಯಲ್ಲಿ ಜೀವನ ಮಾಡುವುದು.

**ITPA ನ ಸೆಕ್ಷನ್ 5:** ವೇಶ್ಯಾವಾಟಿಕೆಗಾಗಿ ವ್ಯಕ್ತಿಯೊಬ್ಬರನ್ನು ಇರಿಸಿಕೊಳ್ಳುವುದು ಅಥವಾ ತೆಗೆದುಕೊಳ್ಳುವುದು ಕೊಂಡುಕೊಳ್ಳುವುದು, ಪ್ರೇರೇಪಿಸುವುದು, ಕಳ್ಳಸಾಗಣೆ ಮಾಡುವುದು.

**ITPA ನ ಸೆಕ್ಷನ್ 6:** ವ್ಯಕ್ತಿಯೊಬ್ಬರನ್ನು ವೇಶ್ಯಾವಾಟಿಕೆ ನಡೆಯುತ್ತಿರುವ ಸ್ಥಳದಲ್ಲಿ ಬಂಧಿಸಿಡುವುದು.

## ಇಂಡಿಯನ್ ಪಿನೆಲ್ ಕೋಡ್

### ವ್ಯಕ್ತಿಯೊಬ್ಬರನ್ನು ಕಳ್ಳಸಾಗಣೆ ಮಾಡುವ ಸೆಕ್ಷನ್ 370

**1. ಯಾರೇ ಆಗಲಿ ಶೋಷಣೆಯ ಉದ್ದೇಶದಿಂದ ವ್ಯಕ್ತಿಗಳನ್ನು ಅಥವಾ ವ್ಯಕ್ತಿಯನ್ನು ಈ ರೀತಿಯಿಂದಗಿ (ಚಿ) ನೇಮಕಾತಿಮಾಡಿಕೊಳ್ಳುವುದು (ಛಿ) ಸಾಗಾಣಿಕೆ ಮಾಡುವುದು (ಛಿ) ನಿಲ್ಲಿಸಿಕೊಳ್ಳುವುದು (ಜ) ವರ್ಗಾವಣೆ ಮಾಡುವುದು ಅಥವಾ (ಜ) ಪಡೆದುಕೊಳ್ಳುವುದು**

- ಭೀತಿಹುಟ್ಟಿಸುವುದರಿಂದ ಅಥವಾ
- ಬಲಪ್ರಯೋಗಿಸುವುದು ಅಥವಾ ಬೇರೆ ಯಾವುದೇ ರೀತಿಯ ದಬ್ಬಾಳಿಕೆ ಅಥವಾ
- ಅಪಹರಣದಿಂದ ಅಥವಾ
- ವಂಚನೆಯಿಂದ ಅಥವಾ ಮೋಸಗೊಳಿಸುವುದರಿಂದ ಅಥವಾ
- ಅಧಿಕಾರದಿಂದ ನಿಂದನೆ ಮಾಡುವುದು ಅಥವಾ
- ನೆಮಕಾತಿ ಮಾಡಿಕೊಂಡ, ಸಾಗಾಣಿಕೆ ಮಾಡಲಾದ, ಇರಿಸಿಕೊಂಡ, ಸಾಗಾಣಿಕೆ ಮಾಡಲಾದ ಅಥವಾ ಪಡೆದುಕೊಂಡ ಕಳ್ಳ ಸಾಗಾಣಿಕೆ ಮಾಡಲಾಗಿರುವ ಯಾವುದೇ ವ್ಯಕ್ತಿಯ ಒಪ್ಪಿಗೆ ಪಡೆದುಕೊಳ್ಳಲು ಪ್ರಚೋದನೆ ಮಾಡುವುದು, ಲಂಚದ ಲಾಭಗಳನ್ನು ಪಡೆದುಕೊಳ್ಳುವುದು ಸೇರಿದಂತೆ ಪಡೆದುಕೊಳ್ಳುವುದು



## ಸೆಕ್ಷನ್ 370 A

**ಬಲಿಯಾದವರು ಅಪ್ರಾಪ್ತ ವಯಸ್ಕರಾಗಿದ್ದರೆ:**

ಯಾರೇ ಆಗಲಿ, ತಿಳಿದು ಅಥವಾ ಅಪ್ರಾಪ್ತ ವಯಸ್ಕರನ್ನು ಕಳ್ಳಸಾಗಣೆ ಮಾಡಲಾಗಿದೆ, ಇಂತಹ ಅಪ್ರಾಪ್ತರನ್ನು ಯಾವುದೇ ರೀತಿಯ ಲೈಂಗಿಕ ಶೋಷಣೆಗೆ ಒಳಪಡಿಸಲಾಗಿದೆ ಎಂದು ನಂಬಿಕೆಬಂದರೆ ಅವರನ್ನು ಕಠಿಣವಾದ ಸೆರೆವಾಸಕ್ಕೆ ತಳ್ಳಬಹುದಾಗಿದೆ ಅದು ಐದು ವರ್ಷಗಳಿಗಿಂತ ಕಡಿಮೆ ಇಲ್ಲದಂತಿರಬೇಕು, ಆದರೆ ಅದನ್ನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾಗಿದೆ ಹಾಗೂ ದಂಡ ವಿಧಿಸಬಹುದಾಗಿದೆ.



**ಬಲಿಯಾದವರು ವಯಸ್ಕರಾಗಿದ್ದರೆ:**

ಯಾರೇ ಆಗಲಿ, ತಿಳಿದು ಅಥವಾ ಅಪ್ರಾಪ್ತ ವಯಸ್ಕರನ್ನು ಕಳ್ಳಸಾಗಣೆ ಮಾಡಲಾಗಿದೆ, ಇಂತಹ ಅಪ್ರಾಪ್ತರನ್ನು ಯಾವುದೇ ರೀತಿಯ ಲೈಂಗಿಕ ಶೋಷಣೆಗೆ ಒಳಪಡಿಸಲಾಗಿದೆ ಎಂದು ನಂಬಿಕೆಬಂದರೆ ಅವರನ್ನು ಕಠಿಣವಾದ ಸೆರೆವಾಸಕ್ಕೆ ತಳ್ಳಬಹುದಾಗಿದೆ ಅದು ಐದು ವರ್ಷಗಳಿಗಿಂತ ಕಡಿಮೆ ಇಲ್ಲದಂತಿರಬೇಕು, ಆದರೆ ಅದನ್ನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾಗಿದೆ ಹಾಗೂ ದಂಡ ವಿಧಿಸಬಹುದಾಗಿದೆ.

# ಮೀಸಲಿರಿಸುವಿಕೆ, ಮಕ್ಕಳ ಲೈಂಗಿಕ ಕಿರುಕುಳ ಮತ್ತು ಹಣಕ್ಕಾಗಿ ಲೈಂಗಿಕ ಶೋಷಣೆಗಳಿಗೆ ಇತರೆ ಕಾನೂನಾತ್ಮಕ ನಿಬಂಧನೆಗಳು:

## ಭಾರತೀಯ ದಂಡ ಸಂಹಿತೆ:

1. ಆಕೆಯ ಸಮುದಾಯದಿಂದ ಸ್ಥಳಾಂತರಿಸಿದ್ದರೆ, ಅದು ಅಪಹರಣ/ಬಂಧನಕ್ಕ ಸಮನಾಗಿರುತ್ತದೆ ಸೆಕ್ಷನ್ 361, 362, 365, 366.
2. ಕಾನೂನು ಬಾಹಿರವಾಗಿ ಕೊಂಡುಕೊಂಡಿರುವುದು ಸೆಕ್ಷನ್ 366 A
3. ಅಪ್ರಾಪ್ತರನ್ನು ವೇಶ್ಯಾವಾಟಿಕೆಗಾಗಿ ಮಾರಾಟ ಮಾಡುವುದು – ಸೆಕ್ಷನ್ 372
4. ಅಪ್ರಾಪ್ತರನ್ನು ವೇಶ್ಯಾವಾಟಿಕೆಗಾಗಿ ಕೊಳ್ಳುವುದು – ಸೆಕ್ಷನ್ 373
5. ತಪ್ಪಾಗಿ ನಿರ್ಭಂಧಿಸುವುದು – ಸೆಕ್ಷನ್ 339
6. ತಪ್ಪಾಗಿ ಬಂಧಿಸುವುದು – ಸೆಕ್ಷನ್ 340
7. ದೈಹಿಕವಾಗಿ ಹಿಂಸಿಸುವುದು/ಗಾಯಗೊಳಿಸುವುದು – ಸೆಕ್ಷನ್ 327, 329
8. ಬಲವಂತವಾಗಿ ಅಪರಾದಕ್ಕೆ ಈಡುಮಾಡುವುದು – ಸೆಕ್ಷನ್ 350
9. ಮಾನಸಿಕವಾಗಿ ಹಿಂಸಿಸುವುದು/ಹಲ್ಲೆ ಮಾಡುವುದು/ಕಿರುಕುಳ ನೀಡುವುದು – ಸೆಕ್ಷನ್ 506
10. ಮನೋವಿಕೃತಿ – ಸೆಕ್ಷನ್ 354
11. ಲೈಂಗಿಕ ದೌರ್ಜನ್ಯ– ಸೆಕ್ಷನ್ 375
12. ವಿಕೃತ ಲೈಂಗಿಕ ಶೋಷಣೆ (ಅನೈಸರ್ಗಿಕ ಅಪರಾಧ) – ಸೆಕ್ಷನ್ 377
13. ಅಪರಾಧ ಸಂಚು – ಸೆಕ್ಷನ್ 120 B

# ಹದಿಹರೆಯದ ನ್ಯಾಯ
# (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯಿದೆ, 2015

## ಬಲಿಯಾದವರು ಅಪ್ರಾಪ್ತ ವಯಸ್ಕರಾಗಿದ್ದರೆ

**ಸೆಕ್ಷನ್ 75:** ಮಗುವಿನ ಮೇಲಿನ ಕ್ರೌರ್ಯಕ್ಕಾಗಿ ಶಿಕ್ಷೆ.

**ಸೆಕ್ಷನ್ 81:** ಯಾವುದೇ ಉದ್ದೇಶಕ್ಕಾಗಿ ಮಗುವನ್ನು ಮಾರಾಟ ಮಾಡುವುದು ಮತ್ತು ಕೊಂಡುಕೊಳ್ಳುವುದು.

**ಸೆಕ್ಷನ್ 84: ಮಗುವನ್ನು ಅಪಹರಣ ಮಾಡುವುದು ಮತ್ತು ಬಂಧನದಲ್ಲಿರಿಸಿಕೊಳ್ಳುವುದು.**

# ಪರಿಶಿಷ್ಟಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ
# (ದೌರ್ಜನ್ಯ ತಡೆ) ಕಾಯಿದೆ, 1989

**ಬಲಿಯಾದವರು ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದವರಾಗಿದ್ದರೆ (SC&ST) ಮತ್ತು ಅಪರಾಧಿ SC/ST ಆಗಿಲ್ಲದಿದ್ದರೆ.**

**ಸೆಕ್ಷನ್ 3 (1)** ಪರಿಶಿಷ್ಟ ಜಾತಿ ಅಥವಾ ಪಂಗಡದ ಸದಸ್ಯರಲ್ಲದ ಯಾರೇ ಆಗಿದ್ದರೂ– (ತಿ) (೧) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯನ್ನು ಆಕೆಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವಳೆಂದು ತಿಳಿದಿದ್ದರೂ ಆಕೆಯನ್ನು ಸ್ಪರ್ಶಿಸಿದರೆ, ಆ ರೀತಿಯ ಸ್ಪರ್ಶವು ಲೈಂಗಿಕ ರೀತಿಯದ್ದಾಗಿದ್ದು ಮತ್ತು ಆಕೆಯ ಒಪ್ಪಿಗೆ ಇಲ್ಲದಿದ್ದರೆ (೨) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯನ್ನು ಆಕೆಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವಳೆಂದು ತಿಳಿದಿದ್ದರೂ ಆಕೆಯತ್ತ ಲೈಂಗಿಕ ಉದ್ದೇಶದ ಪದಗಳನ್ನು, ಕ್ರಿಯೆಗಳನ್ನು ಅಥವಾ ಸಂಜ್ಞೆಗಳನ್ನು ಬಳಸಿದರೆ.

**ಸೆಕ್ಷನ್ 3 (2)** ಪರಿಶಿಷ್ಟ ಜಾತಿ ಅಥವಾ ಪಂಗಡದ ಸದಸ್ಯರಲ್ಲದ ಯಾರೇ ಆಗಿದ್ದರೂ – (೫) ಭಾರತೀಯ ದಂಡ ಸಂಹಿತೆ (೧೮೬೦ ರ ೪೫) ಯಡಿಯಲ್ಲಿ ಯಾವುದೇ ಅಪರಾಧವನ್ನು ಮಾಡಿದರೆ ಅದಿ ಅಪರಾಧವಾಗಿದ್ದು ಹತ್ತು ವರ್ಷಗಳ ಸೆರೆವಾಸದ ಶಿಕ್ಷೆಯಾಗುತ್ತದೆ ಅಥವಾ ವ್ಯಕ್ತಿ ಅಥವಾ ಸ್ವತ್ತಿಗಿಂತ ಹೆಚ್ಚು [ಅಂತಹ ವ್ಯಕ್ತಿಯು ಪರಿಶಿಷ್ಟಜಾತಿ ಅಥವಾ ಪಂಗಡಕ್ಕೆ ಸೇರಿದವರೆಂದು ತಿಳಿದೂ] ಜೀವಾವಧಿಯೊಂದಿಗೆ ದಂಡವಿರುವ ಶಿಕ್ಷೆಯಾಗಬಹುದು.

# ದೇವದಾಸಿ ಪದ್ಧತಿ – ರಕ್ಷಣೆ, ಸಂರಕ್ಷಣೆ ಮತ್ತು ಪುನರ್ವಸತಿ

## 1. ಪರಿಹಾರ

### ಕರ್ನಾಟಕ ದೇವದಾಸಿ (ಸಮರ್ಪಣೆಯ ನಿಷೇಧ) ಕಾಯಿದೆ, 1982 ಮತ್ತು ತಿದ್ದುಪಡಿ ಕಾಯಿದೆ, 2010 – KDPD ಕಾಯಿದೆ]

### ಜಿಲ್ಲಾ ಮ್ಯಾಜಿಸ್ಟ್ರೇಟ್:

**KDPD ಕಾಯಿದೆ ಸೆಕ್ಷನ್ 3೦ ರಂತೆ – ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ರು ಮೀಸಲು ಬಿಡುವುದನ್ನು ನಿಷೇಧಿಸುವ ಆದೇಶ ನೀಡುವ ಅಧಿಕಾರ ಹೊಂದಿರುತ್ತಾರೆ.**

**ಸೆಕ್ಷನ್ 3A (1):** ಈ ಕಾಯಿದೆಗೆ ವಿರುದ್ಧವಾಗಿ ಏನೇ ಇದ್ದರೂ ದೇವದಾಸಿ ನಿಷೇಧ ಅಧಿಕಾರಿಯ ಅರ್ಜಿ ಅಥವಾ ದೂರಿನ ಮೂಲಕ ಯಾವುದೇ ವ್ಯಕ್ತಿಯಿಂದ ಮಾಹಿತಿಯನ್ನು ಪಡೆದಾಗ, ಜಿಲ್ಲಾ ಮ್ಯಾಜಿಸ್ಟ್ರೇಟರು ಅಥವಾ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರು ಕಾಯಿದೆಯಂತೆ ಮೀಸಲು ಬಿಡುವುದರ ವ್ಯವಸ್ಥೆ ಮಾಡಲಾಗಿರುವ ಬಗ್ಗೆ ಸಂತೃಪ್ತರಾದಲ್ಲಿ ಅಂತಹ ಮ್ಯಾಜಿಸ್ಟ್ರೇಟರು ಆ ಕಾರ್ಯದಲ್ಲಿ ನಿರತರಾಗಿರುವ ಯಾವುದೇ ವ್ಯಕ್ತಿಯ ಅಥವಾ ಸಂಸ್ಥೆಯ ಸದಸ್ಯರ ಅಥವಾ ನಿಷೇಧದೊಂದಿಗೆ ಸಹಭಾಗಿಯಾಗಿರುವವರ ಇಂತಹ ಮೀಸಿಲಿರಿಸುವುದನ್ನು ತಡೆಯಲು ಅವರ ವಿರುದ್ಧವಾಗಿ ನಿಷೇಧವನ್ನು ಜಾರಿ ಮಾಡಬಹುದಾಗಿದೆ.

### ದೇವದಾಸಿ ಮೀಸಲುಬಿಡುವುದರ ನಿಷೇಧ ಅಧಿಕಾರಿ:

**ಸೆಕ್ಷನ್ 3D (4) ರಂತೆ ದೇವದಾಸಿ ಮೀಸಲುಬಿಡುವುದರ ನಿಷೇಧ ಅಧಿಕಾರಿ:**

**A.** ಸೆಕ್ಷನ್ 3A ರ ಉಪ–ಸೆಕ್ಷನ್ (1) ರ ಅಡಿಯಲ್ಲಿ ಮೀಸಲು ಬಿಡುವುದನ್ನು ತಡೆಯಲು ಅರ್ಜಿಯನ್ನು ಮಾಡಿ ಅಂತಹ ಕ್ರಮತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

**B.** ಕಾಯಿದೆಯ ನಿಬಂಧನೆಗಳ್ಳೆಗೆ ಅಡ್ಡಿಪಡಿಸುವ ವ್ಯಕ್ತಿಯ್ ವಿರುದ್ಧ ಸಾಕ್ಷಿಗಳನ್ನು ಸಂಗ್ರಹಿಸಲು ಪರಿಣಾಮಕಾರಿ ಶಿಕ್ಷೆವಿಧಿಸಲು

**C.** ಘಟನೆಯ ಸ್ಥಳದಲ್ಲಿಯೇ ಪಂಚನಾಮೆಯನ್ನು ಬರೆಯಲು ಕ್ರಮ ತೆಗೆದುಕೊಳ್ಳಲು ಮತ್ತು ಸಾಕ್ಷಿಯ ಸಹಿ ಪಡೆಯಲು.

# ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯಿದೆ, 2012

1. **ಆರಕ್ಷಕರು**

2. **ಯಾವುದೇ ವ್ಯಕ್ತಿ:** ಈ ಅಧಿನಿಯಮದಡಿಯಲ್ಲಿ ಯಾವುದೇ ವ್ಯಕ್ತಿಯು ಅಪರಾಧ ಮಾಡಿದ್ದಲ್ಲಿ ಅವರು ಅಥವಾ ಇಂತಹ ಅಪರಾಧ ನಡೆಯುತ್ತಿರುವುದು ತಿಳಿದಿದ್ದರೂ ಅವರು ಪೋಲೀಸರಿಗೆ ಮಾಹಿತಿಯನ್ನು ನೀಡಬೇಕು. { POCSO ಕಾಯಿದೆ 2012 ರ (ಸೆಕ್ಷನ್ 19 (1))}



# ಹದಿಹರೆಯದ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯಿದೆ, 2015

## ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ

ಸೆಕ್ಷನ್ 2 (14) viii, ix, ಮತ್ತು x ರಂತೆ ಮೀಸಲಿರಿಸಲಾಗುತ್ತಿರುವ ಅಥವಾ ಮೀಸಲಿರಿಸಲಿರುವ ಮಗುವು "ರಕ್ಷಿಸಬೇಕಾದ ಮತ್ತು ಆರೈಕೆಗೆ ಒಳಪಡಬೇಕಾದ ಮಗು" ವರ್ಗದಡಿಯಲ್ಲಿ ಬರುತ್ತದೆ.

ಸೆಕ್ಷನ್ 29 & 30 ರಂತೆ ಮಕ್ಕಳ ಕಲ್ಯಾಣ ಸಮಿತಿಗೆ "ರಕ್ಷಿಸಬೇಕಾದ ಮತ್ತು ಆರೈಕೆಗೆ ಒಳಪಡಬೇಕಾದ ಮಗು" ರಕ್ಷಿಸಲು, ಚಿಕಿತ್ಸೆ ಕೊಡಿಸಲು, ಮತ್ತು ಆರೈಕೆ ಮಾಡುವ ಮತ್ತು "ರಕ್ಷಿಸಬೇಕಾದ ಮತ್ತು ಆರೈಕೆಗೆ ಒಳಪಡಬೇಕಾದ ಮಗು" ವಿಗೆ ಅಭಿವೃದ್ಧಿಪಡಿಸುವ ಪುನರ್ ವಸತಿ ನೀಡುವ ವಿಶೇಷ ಅಧಿಕಾರವಿರುತ್ತದೆ.

# 2. ದೇವದಾಸಿ ಪದ್ಧತಿಯ ತಡೆ

## ದೇವದಾಸಿ ಮೀಸಲು ನಿಷೇಧ ಅಧಿಕಾರಿ

### KDPD ಕಾಯಿದೆ ಸೆಕ್ಷನ್ 3D (4):

**A.** ಒಂದೊಂದು ಪ್ರಕರಣಕ್ಕೆ ಸಲಹೆ ನೀಡಲು ಅಥವಾ ಸ್ಥಳೀಯ ಜನರೊಂದಿಗೆ ಸಾಮಾನ್ಯವಾಗಿ ಒಟ್ಟಾಗಿ ದೇವದಾಸಿಯರನ್ನು ಬಿಡುವುದನ್ನು ಪ್ರೋತ್ಸಾಹಿಸದಿರಲು, ಸಹಾಯ ಮಾಡದಿರಲು ಅಥವ ಅದಕ್ಕೆ ಅವಕಾಶ ಮಾಡಿಕೊಡದಂತೆ ಸಮಾಲೋಚನೆ ಮಾಡಲು.

**B.** ಮೀಸಲು ಬಿಡುವುದರಿಂದಾಗುವ ಕೆಟ್ಟ ಪರಿಣಾಮಗಳ ಬಗ್ಗೆ ತಿಳುವಳಿಕೆ ಮೂಡಿಸಲು.

**C.** ಸಮುದಾಯವನ್ನು ಮೀಸಲು ಬಿಡುವ ಸಮಸ್ಯೆಯ ಬಗ್ಗೆ ಜಾಗರೂಕಗೊಳಿಸಲು.

**D.** ಕಾಲಕಾಲಕ್ಕೆ ರಾಜ್ಯ ಸರ್ಕಾರವು ನಿರ್ದೇಶಿಸುವ ಫಲಿತಾಂಶಗಳನ್ನು ಅಂಕಿ ಅಂಶಗಳನ್ನು ಪ್ರಚುರಪಡಿಸಲು.

# 3. ದೇವದಾಸಿಯರ ಸಂರಕ್ಷಣೆ ಮತ್ತು ಪುನರ್ ವಸತಿ

ದೇವದಾಸಿಯರನ್ನಾಗಿ ಬಿಟ್ಟ ಸಂರಕ್ಷಿತ ಮಹಿಳೆಯರಿಗೆ ರಾಜ್ಯ ಸರ್ಕಾರವು "ದೇವದಾಸಿಯರ ಪುನರ್ ವಸತಿ ಯೋಜನೆ" ಯಡಿಯಲ್ಲಿ ಸಮಾಲೋಚನೆ ಮತ್ತು ತಿಳುವಳಿಕೆ ನೀಡಿ ಪುನರ್ ವಸತಿ ಕಲ್ಪಿಸಬೇಕು ಮತ್ತು ಅವರನ್ನು ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಮಾಡಿ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿಸಬೇಕು, ಅಗತ್ಯವಿದ್ದರೆ ಅವರಿಗೆ ರಕ್ಷಣೆ ಅಥವಾ ರಿಮ್ಯಾಂಡ್ ಹೋಮ್ ಗಳಲ್ಲಿ ವಸತಿ ಕಲ್ಪಿಸಿ ಲಭ್ಯವಿರುವ ಸಬ್ಸಿಡಿಗಳನ್ನು ಪಡೆದು ಮತ್ತು ಬ್ಯಾಂಕ್ ಗಳಿಂದ ಸಾಲ ಸೌಲಭ್ಯಗಳನ್ನು ಒದಗಿಸಿ ಅವರು ಸ್ವಾವಲಂಬಿಗಳಾಗುವಂತೆ ಮಾಡಬೇಕು. {KDPD ಕಾಯಿದೆಯ ಸೆಕ್ಷನ್ 3B}

# ಮಕ್ಕಳ ಲೈಂಗಿಕ ಕಿರುಕುಳ

## ಪೋಷಣೆ ಮಾಡುವವರಿಗೆ ಒಂದು ಕೈಪಿಡಿ



blank page

# ಮಕ್ಕಳ ಲೈಂಗಿಕ ಕಿರುಕುಳ ಎಂದರೇನು?

ಮಕ್ಕಳ ಲೈಂಗಿಕ ಕಿರುಕುಳ ಒಂದು ಶಕ್ತಿಯ ಸಮರ್ಥನೆಯಾಗಿದೆ, ಮಕ್ಕಳ ಒಪ್ಪಿಗೆ ನೀಡುವ ವಯಸ್ಸಿನ ಮುಂಚೆ ವಿರುದ್ಧ ಲೈಂಗಿಕ ಚಟುವಟಿಕೆಗಳ ಮೂಲಕ, – ಅಂದರೆ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಒಂದು ಮಗು ಅದಕ್ಕೆ ಲೈಂಗಿಕ ಚಟುವಟಿಕೆಗೆ ಒಪ್ಪಿಗೆ ಇದೆಯೋ ಅಥವಾ ಇಲ್ಲವೋ ಎಂಬುದು ಗಣನೀಯವಲ್ಲ.

## ಇವುಗಳೂ ಸಹ ಲೈಂಗಿಕ ಕಿರುಕುಳದಲ್ಲಿ ಸೇರುತ್ತವೆ:



- **ಮುಟ್ಟುವ ಲೈಂಗಿಕ ಕಿರುಕುಳ:** ಲೈಂಗಿಕ್ಅಂಗಗಳಿಗೆ ಮುತ್ತಿಕ್ಕುವುದು/ಗುದದ್ವಾರ, ಹಸ್ತಮೈಥುನ,ಮೌಖಿಕ ಲೈಂಗಿಕ ಕ್ರಿಯೆ, ವಸ್ತು/ಬೆರಳನ್ನು ಯೋನಿ/ಗುದದ್ವಾರಕ್ಕೆ ತೂರಿಸುವುದು ಅದಕ್ಕೆ ಯಾವುದೇ ಮಾನ್ಯತೆ ಇರುವ ವೈದ್ಯಕೀಯ ಉದ್ದೇಶ ಅಥವಾ/ಇರುವುದಿಲ್ಲ ಮತ್ತು ಮಗುವು ಇಂತಹ ಕ್ರಿಯೆಗಳನ್ನು ಮಾಡುವಂತೆ ಕ್ರಿಯೆಯಲ್ಲಿ ತೊಡಗುವವನು ಪ್ರೋತ್ಸಾಹಿಸುತ್ತಾನೆ.
- **ಲೈಂಗಿಕ ಶೋಷಣೆ:** ಮಗು ಒಂದನ್ನು ಅಶ್ಲೀಲವಾಗಿ ವೇಶ್ಯಾವಾಟಿಕೆಗೆ, ಚಲನ ಚಿತ್ರತೆಗೆಯುವುದು, ಛಾಯಾಚಿತ್ರ ತೆಗೆಸಿಕೊಳ್ಳುವಂತೆ ಮಾಡುವುದು, ಕೋರುವುದು, ತೊಡಗಿಸುವುದು.



- **ಸ್ಪರ್ಷವಿಲ್ಲದ ಲೈಂಗಿಕ ಕಿರುಕುಳ:** ತೋರ್ಪಡಿಕೆ, ಲೈಂಗಿಕ ಚಟುವಟಿಕೆ ಒಡ್ಡಿಕೊಳ್ಳುವುದು, ಪ್ರಚೋದನಾತ್ಮಕ ವಸ್ತುಗಳು ಅಥವಾ ಇಂತಹ ಕ್ರಿಯೆಗಳ ದೃಶ್ಯಗಳನ್ನು ತೋರಿಸುವುದು, ಮಗುವಿನ ಮುಂದೆ ಹಸ್ತ ಮೈಥುನ ಮಾಡಿಕೊಳ್ಳುವುದು.

# ಸುಳ್ಳುಗಳು ಮತ್ತು ಸತ್ಯಗಳು

**ಕಟ್ಟುಕಥೆ: ಮಗುವಿನ ಉಡುಪುಗಳು ಮತ್ತು ವರ್ತನೆಯು ಕಾರಣದಿಂದ ಲೈಂಗಿಕ ಕಿರುಕುಳ ನೀಡುವುದು.**

**ವಾಸ್ತವ:** ಕಿರುಕುಳಕ್ಕಾಗಿ ಮಗುವನ್ನು ನಿಂದಿಸಬಾರದು. ನಿಂದಿಸಬೇಕಾಗಿರುವುದು ಕಿರುಕುಳ ನೀಡುವವನನ್ನು ಆವನು/ಅವಳು ಅವನ/ಆಕೆಯ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದಾಳೆ/ನೆ, ಮಗುವಿನೊಂದಿಗೆ ವೇಶ್ಯಾವಾಟಿಕೆ ಮಾಡಿ ಮಗುವಿನ ನಂಬಿಕೆಯನ್ನು ಹಾಳು ಮಾಡಿದ್ದಾನೆ/ಳೆ.

**ಕಟ್ಟುಕಥೆ: ಪರಿಚಿತ ವ್ಯಕ್ತಿಯು ಮಗುವಿಗೆ ಲೈಂಗಿಕ ಕಿರುಕುಳ ನೀಡಲಾರ.**

**ವಾಸ್ತವ:** ಕಿರುಕುಳ ನೀಡುವವರು ಸಾಮಾನ್ಯವಾಗಿ ಮಗುವಿಗೆ ಮತ್ತು ಕುಟುಂಬದವರಿಗೆ ಪರಿಚಯ ಇರುವವರೇ ಆಗಿರುತ್ತಾರೆ.

**ಕಟ್ಟುಕಥೆ: ಲೈಂಗಿಕವಾಗಿ ದೌರ್ಜನ್ಯಕ್ಕೊಳಗಾದ ಮಗುವಿಗೆ HIV ತಗುಲುತ್ತದೆ.**

**ವಾಸ್ತವ:** ಲೈಂಗಿಕ ದೌರ್ಜನ್ಯಕ್ಕೊಳಗಾದ ಮಗುವಿಗೆ ಒಳತೂರಿಸುವ ಲೈಂಗಿಕ ಕಿರುಕುಳವಾಗಿರುವುದಿಲ್ಲ. ಎಲ್ಲಾ ಒಳತೂರಿಸುವ ಲೈಂಗಿಕ ದೌರ್ಜನ್ಯಗಳೂ **HIV**ಗೆ ಈಡಾಗಲೇ ಬೇಕೆಂದಿಲ್ಲ.

**ಕಟ್ಟುಕಥೆ: ಲೈಂಗಿಕ ದೌರ್ಜನ್ಯವು ಬಡ ಮತ್ತು ವಲಸಿಗ ಕುಟುಂಬಗಳಿಗೆ ಮಾತ್ರವೇ ಆಗುತ್ತದೆ.**

**ವಾಸ್ತವ:** ಕಿರುಕುಳ ನೀಡುವವನು ಮಗುವಿನ ಆರ್ಥಿಕ ಸ್ಥಿತಿ, ವರ್ಗ ಅಥವಾ ಪ್ರದೇಶದ ಆಧಾರದ ಮೇಲೆ ಕಿರುಕುಳ ನೀಡುವುದಿಲ್ಲ.

**ಕಟ್ಟುಕಥೆ: ಮಗುವು ಕಿರುಕುಳ ನೀಡುವವನನ್ನು ಮರೆತರೆ ಒಳ್ಳೆಯದು.**

**ವಾಸ್ತವ:** ಕಿರುಕುಳವು ಮಗುವಿಗೆ ಭಾವನಾತ್ಮಕ ಮತ್ತು ಮಾನಸಿಕ ತೊಂದರೆಯನ್ನುಂಟು ಮಾಡುತ್ತದೆ. ಅದನ್ನು ವೃತ್ತಿಪರ ಸೇವೆ ಮತ್ತು ಆರೈಕೆಯಿಂದ ವಾಸಿ ಮಾಡಬಹುದು.

# ಲೈಂಗಿಕ ಕಿರುಕುಳದ ಹೆಚ್ಚು ಅಪಾಯದಲ್ಲಿರುವ ಮಕ್ಕಳು

ಲೈಂಗಿಕ ಕಿರುಕುಳವು ಯಾವುದೇ ವಯಸ್ಸಿನ ಅಥವಾ ಲಿಂಗದ ಮಗುವಿಗೂ ಆಗಬಹುದು. ಮಗು ಅಪಾಯಕ್ಕೊಳಗಾಗಲು ಯಾವುದೇ ನಿರ್ದಿಷ್ಟ ಕಾರಣಗಳಿಲ್ಲ. ಕೆಲವು ಅಪಾಯದ ಅಂಶಗಳೆಂದರೆ:

- ಅನಾಥ ಮಗು
- ಹೆತ್ತವರ ಒಂಟಿ ಮಗು
- ಮಲ ತಂದೆ ತಾಯಿಯರ ಮಗು
- ಕುಟುಂಬದಲ್ಲಿ ವ್ಯಸನಿಗಳಿರುವ ಮಗು
- ಭಾವನಾತ್ಮಕವಾಗಿ ಅಸ್ಥಿರತೆ ಇರುವ ಹೆತ್ತವರನ್ನು ಹೊಂದಿರುವ ಮಗು
- ಪ್ರೀತಿ ಕಾಳಜಿಗಳ ಕೊರತೆ ಇರುವ ಮಗು.
- ನಿಷ್ಕ್ರಿಯತೆ ಇರುವ ಕುಟುಂಬದಲ್ಲಿರುವ ಮಗು (ದ್ವಂದ್ವ, ಅಸಭ್ಯ ವರ್ತನೆ, ತಿರಸ್ಕಾರ)
- ಮಗು ಮತ್ತು ಹೆತ್ತವರ ನಡುವೆ ಉತ್ತಮ ಸಂಬಂಧವಿಲ್ಲದಿರುವ ಮಗು
- ಮೇಲ್ವಿಚಾರಣೆ ಇಲ್ಲದಿರುವ ಮಗು
- ವಸತಿ ರಹಿತ ಮಗು




# ಮಕ್ಕಳ ಲೈಂಗಿಕ ಕಿರುಕುಳದ ವಿವರಗಳು

**ಹೆಚ್ಚಿನ ಸಂಖ್ಯೆಯ ಕಿರುಕುಳ ನೀಡುವವರು ಸಿಕ್ಕುಹಾಕಿಕೊಳ್ಳುವುದಿಲ್ಲ ಮತ್ತು ಅವರಿಗೆ ಯಾವುದೇ ಅಪರಾಧಿ ದಾಖಲೆಗಳಿರುವುದಿಲ್ಲ.**

- ಕಿರುಕುಳ ನೀಡುವವನು ಮಕ್ಕಳೊಂದಿಗೆ ಹೆಚ್ಚು ಸ್ನೇಹದಿಂದಿರುತ್ತಾನೆ.
- ಕಿರುಕುಳ ನೀಡುವವನು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವುದರಿಂದ ಮತ್ತು ಕಾರಣವಿಲ್ಲದೇ ಕಾಣಿಕೆಗಳನ್ನು ನೀಡುವುದರಿಂದ ಹೆಚ್ಚಿನ ಗಮನ ನೀಡುತ್ತಾನೆ.
- ಕಿರುಕುಳ ನೀಡುವವನು ಸಾಮಾನ್ಯವಾಗಿ ಸತ್ಯವನ್ನು ನುಡಿಯುವುದಿಲ್ಲ.
- ಕಿರುಕುಳ ನೀಡುವವನು ಮಗುವಿನೊಂದಿಗಿನ ಸಂಬಂಧವನ್ನು ಕುಶಲ ವಿಧಾನದಿಂದ ಬಳಸಿಕೊಳ್ಳುತ್ತಾನೆ.
- ಕಿರುಕುಳ ನೀಡುವವನು ತಮ್ಮ ಹೆಚ್ಚಿನ ಸಮಯವನ್ನು ಮಕ್ಕಳೊಂದಿಗೆ ಅಥವಾ ಮಕ್ಕಳಿರುವ ಸ್ಥಳಗಳಲ್ಲಿ **ಕಳೆಯುತ್ತಾರೆ (ಆಟದ ಮೈದಾನ, ಮಕ್ಕಳ ಪಾರ್ಕ್, ಶಾಲೆಯ ಹೊರಗೆ)**

## ಮಗುವಿಗೆ ಕಿರುಕುಳ ನೀಡಲು ಕಿರುಕುಳ ನೀಡುವವನು ಅಳವಡಿಸಿಕೊಳ್ಳುವ ವಿಧಾನಗಳು:

1. ಕಿರುಕುಳ ನೀಡುವವನು ಮಗುವನ್ನು ಗುರುತಿಸಿಕೊಳ್ಳುತ್ತಾನೆ





2. ಮಗುವಿನೊಂದಿಗೆ ಸ್ನೇಹದಿಂದಿರುತ್ತಾನೆ



3. ಮಗುವನ್ನು ಹೆದರಿಸುತ್ತಾನೆ

4. ಮಗುವಿಗೆ ಭೀತಿಯನ್ನುಂಟು ಮಾಡುತ್ತಾನೆ



5. ಕಿರುಕುಳ ನೀಡುವವನು ಮೊದಲ ಬಾರಿಗೆ ಕಿರುಕುಳ ನೀಡಿ/ಪರೀಕ್ಷಿಸುತ್ತಾನೆ

6. ಪುನಃ ಪುನಃ ಕಿರುಕುಳ ನೀಡುತ್ತಾನೆ

# ಮಕ್ಕಳ ಲೈಂಗಿಕ ಕಿರುಕುಳವನ್ನು ಗುರುತಿಸುವುದು

**ಲೈಂಗಿಕ ಕಿರುಕುಳವು ಯಾವುದೇ ವಯಸ್ಸಿನ ಮಗುವಿಗೂ ಆಗಬಹುದು.**


**ಮೊದಲ ಬಾರಿಗೆ ಲೈಂಗಿಕವಾಗಿ ಕಿರುಕುಳಕ್ಕೊಳಗಾದ ಮಕ್ಕಳು ಈ ಕೆಳಗಿನ ವರ್ತನೆಗಳನ್ನು ತೋರುತ್ತಾರೆ:**

- ಮೌನ.
- ಕೆಲವು ವ್ಯಕ್ತಿಗಳು, ಸ್ಥಳ, ವಸ್ತುವಿಗೆ ಹೆದರುವುದು.
- ಅವರು ಇಷ್ಟಪಡುವ ವಸ್ತುಗಳಲ್ಲಿ ಆಸಕ್ತಿ ಕಳೆದುಕೊಳ್ಳುವುದು.
- ಆಹಾರ ಪದ್ದತಿಗಳಲ್ಲಿ ಬದಲಾವಣೆ.
- ಮಲಗುವ ಪದ್ದತಿಯಲ್ಲಿ ಬದಲಾವಣೆ–ಹೆಚ್ಚು ನಿದ್ರೆ ಮಾಡುವುದು ಅಥವಾ ನಿದ್ರೆ ಮಾಡದಿರುವುದು.
- ವರ್ತನೆಯಲ್ಲಿ ಹಠಾತ್ ಬದಲಾವಣೆ.
- ಪ್ರತ್ಯೇಕವಾಗಿರುವುದು.
- ಚಿಂತೆಯಲ್ಲಿ ಮುಳುಗಿರುವುದು.
- ದಿನ ನಿತ್ಯದ ಅನುಸರಣೆಗಳನ್ನು ನಿರಾಕರಿಸುವುದು.

**ಕಿರುಕುಳ ಪುನರಾವರ್ತನೆಯಾದರೆ, ಮಗುವು ಈ ಕೆಳಗಿನ ವರ್ತನೆಯನ್ನು ತೋರಬಹುದು:**

- ಇತರರೊಂದಿಗೆ ವ್ಯಗ್ರವಾಗಿರುವುದು – ಜಗಳವಾಡುವುದು.
- ವ್ಯಗ್ರತೆ–ವಸ್ತುಗಳನ್ನು ಒಡೆದು ಹಾಕುವುದು.
- ಹಿಂಸಾಪ್ರವೃತ್ತಿ.
- ಕೋಪಗೊಳ್ಳುವುದು ಮತ್ತು ಕಿರಿಕಿರಿ ಮಾಡುವುದು.
- ನಿಯಂತ್ರಿಸಲಾಗದ ಕೋಪ.

- ವರ್ತನೆಯಲ್ಲಿ ಹಠಾತ್ ಬದಲಾವಣೆ (ಹಿಂತೆಗೆದುಕೊಳ್ಳುವಿಕೆ, ವಯಸ್ಕರಿಗೆ ಅವಿಧೇಯತೆ, ಒಬ್ಬಂಟಿಯಾಗಿರಲು ಹೆದರುವುದು, ಉದ್ವಿಗ್ನತೆ).
- ಸುತ್ತಲಿನ ಜನರಿಂದ ಹತಾಶಗೊಳ್ಳುವುದು.
- ದಿನ ನಿತ್ಯದ ಚಟುವಟಿಕೆಗಳಲ್ಲಿ ತೊಂದರೆ.
- ಹೆಚ್ಚಾಗಿ ಅಳುವುದು.
- ಕೆಟ್ಟಕನಸು.
- ಲೈಂಗಿಕ ರೀತಿಯ ಭಾಷೆ, ವರ್ತನೆ ಮತ್ತು ಕ್ರಿಯೆಗಳು.
- ಓಡಿಹೋಗುವುದು, ಸುಳ್ಳು ಹೇಳುವುದು, ಕದಿಯುವಂತಹ ಅಪರಾಧಗಳು.
- ಹಾನಿಕಾರಕ ವರ್ತನೆಗಳು– ಮುಂಗೈ ಕತ್ತರಿಸಿಕೊಳ್ಳುವುದು, ಆತ್ಮಹತ್ಯೆ ಪ್ರಯತ್ನಗಳು.



**ಪೋಷಕರು ಈ ಕೆಳಗಿನ ಚಿನ್ಹೆಗಳ ಬಗ್ಗೆ ಎಚ್ಚರಿಕೆ ವಹಿಸಬೇಕು:**

**a) ದೈಹಿಕ ಚಿನ್ಹೆಗಳು (ಸೂಚನೆಗಳು)**

- ಮಗುವು ವಕ್ರವಾಗಿ ನಡೆಯುವುದು.
- ಒಳ ಉಡುಪಿನಲ್ಲಿ ರಕ್ತ ಸ್ರಾವ.
- ಹುಡುಗಿಯರಾದರೆ – ಋತುಚಕ್ರದಲ್ಲಿ ವ್ಯತ್ಯಾಸ, ಗರ್ಭಧಾರಣೆ.
- ಗುದದ್ವಾರ ಯೋನಿಗಳಲ್ಲಿ ನೋವಾಗಿರುವುದನ್ನು ಮಗು ಹೇಳಿಕೊಳ್ಳುವುದು.
- ಸ್ರಾವ, ಲೈಂಗಿಕ ಅಂಗದ ಸ್ಥಳದಲ್ಲಿ ತುರಿಕೆ.
- ಯೋನಿ/ಗುದದ್ವಾರಗಳಲ್ಲಿ ಹಾನಿಯಾಗಿರುವುದು.

**b) ಭಾವನಾತ್ಮಕ ಬದಲಾವಣೆಗಳು:**

- ಋಣಾತ್ಮಕ ಭಾವನೆಗಳನ್ನು ಹೊಂದುವುದು (ತಿರಸ್ಕಾರ, ತುಚ್ಛತೆ).
- ತಮ್ಮ ಬಗೆಗೇ ದ್ವಂದ್ವ ಭಾವನೆಗಳು.
- ಕಿರುಕುಳಕ್ಕಾಗಿ ತನ್ನನ್ನೇ ಬೈಯುವುದು.
- ತನ್ನನ್ನೇ ಹಿಂಸಿಸಿಕೊಳ್ಳುವುದು.

**ಇವುಗಳಲ್ಲಿನ ಯಾವುದೇ ಒಂದು ಚಿನ್ಹೆಯು ಕಂಡುಬರುವುದರಿಂದ ಅದು ಲೈಂಗಿಕ ಕಿರುಕುಳಕ್ಕೊಳಗಾಗಿದೆ ಎಂದು ಅರ್ಥವಲ್ಲ, ಆದರೆ ಅನೇಕ ಚಿನ್ಹೆಗಳಿರುತ್ತವೆ, ಎಚ್ಚರಿಕೆ ವಹಿಸಲು ಇದು ಸಕಾಲ ಅಲ್ಲದೆ ಪೋಷಕರು ಸಹಾಯ ಪಡೆದುಕೊಳ್ಳುವುದನ್ನು ಪರಿಗಣಿಸಬಹುದು.**

# ಕಿರುಕುಳಕ್ಕೊಳಗಾಗಿರುವುದನ್ನು ಬಹಿರಂಗಪಡಿಸುವುದು

ಲೈಂಗಿಕ ಕಿರುಕುಳಕ್ಕೊಳಗಾದ ಮಕ್ಕಳಿಗೆ ಕಿರುಕುಳ ನೀಡಿದವರು "ಗುಟ್ಟನ್ನು" ಯಾರಿಗೂ ಹೇಳದಂತೆ ಹೇಳಿರುತ್ತಾರೆ.

ಕಿರುಕುಳ ನೀಡುವವರು ಕುಟುಂಬದ ಸದಸ್ಯರು, ಸ್ನೇಹಿತರು, ನೆರೆಯವರು, ಶಿಕ್ಷಕರೇ ಆಗಿದ್ದರೆ ಆಗ ಮಗುವು ಬಹಿರಂಗ ಪಡಿಸುವ ಅವಕಾಶಗಳು ಕಡಿಮೆ.

**ಮಗುವು ಬಹಿರಂಗ ಪಡಿಸಿದಾಗ ಅಥವಾ ಕಿರುಕುಳದ ಬಗ್ಗೆ ಹೇಳಿಕೊಂಡಾಗ ಪೋಷಕರ ಪ್ರತಿಕ್ರಿಯೆ:**

| ವಯಸ್ಕರ ಸಾಮಾನ್ಯ ಪ್ರತಿಕ್ರಿಯೆ | ಮಗುವಿನಿಂದ ನಿರೀಕ್ಷಿಸಬಹುದಾದ ಪ್ರತಿಕ್ರಿಯೆ |
|---|---|
| ಅಯ್ಯೋ ದೇವರೇ! | ಪರವಾಗಿಲ್ಲ ನಾನು ನಿನ್ನೊಡನೆ ಇದ್ದೇನೆ. |
| ನಿಜವಾಗಿಯೂ? | ನೀನು ಹೇಳುವುದನ್ನು ನಾನು ನಂಬುತ್ತೇನೆ. |
| ನಾನು ಇದನ್ನು ನಂಬಲಾರೆ! | ಅದು ನಿನ್ನ ತಪ್ಪಲ್ಲ. |
| ಹಾಗೇನು? | ನೀನು ಕಿರುಕುಳ ನೀಡುವವರೊಂದಿಗೆ ಕೋಪಗೊಂಡಿದ್ದರೆ ಅದು ಸ್ರರಿ. |
| ಹಾಗೆ ನಡೆದದ್ದರ ಬಗ್ಗೆ ನೀನು ಖಚಿತವಾಗಿದ್ದೀಯಾ? | ಚಿಂತಿಸಬೇಡ ಕಿರುಕುಳ ನೀಡುವವನು ನಿನಗೆ ಮತ್ತೆ ತೊಂದರೆ ಕೊಡುವುದಿಲ್ಲ. |
| ನೀನು ಸುಳ್ಳು ಹೇಳುತ್ತಿಲ್ಲವೆಂದು ಭಾವಿಸುತ್ತೇನೆ. | ನೀನು ಇಚ್ಚಿಸಿದರೆ, ನಾವು ಕಿರುಕುಳ ನೀಡುವವನು ಬೇರೆ ಮಕ್ಕಳಿಗೆ ಹೇಗೆ ಕಿರುಕುಳ ನೀಡುವುದಿಲ್ಲ ಎಂದು ನಾವು ನೋಡಬಲ್ಲೆವು. |
| ನೀನು ಏನು ಅಸಂಬದ್ಧವಾದದ್ದನ್ನು ಹೇಳುತ್ತಿದ್ದೀಯಾ? | ನಾನು ಏನು ಮಾಡ ಬೇಕಾದುದು ಮತ್ತೇನಾದರೂ ಇದೆಯೇ. |
| ಏನು ಹೊಲಸು! ಈ ವ್ಯಕ್ತಿ ಹಾಗೆ ಮಾಡಲಾರ | ಇದ್ದಲ್ಲಿ ನಾನು ನಿನ್ನಜೊತೆಗಿದ್ದೇನೆ. |
| ನೀನು ನನಗೆ ಮೊದಲೇ ಹೇಳಬೇಕಿತ್ತು. ಈಗೇಕೆ ಹೇಳುತ್ತಿದ್ದೀಯೇ? | ಒಳ್ಳೆಯದು ನೀನು ನನಗೆ ಹೇಳಿದೆ. |
| ಈಗ ಅದರ ಬಗ್ಗೆ ಮತ್ತೊಮ್ಮೆ ಮಾತನಾಡಬೇಡ. | ನೀನು ನನ್ನೊಂದಿಗೆ ಯಾವುದೇ ಭಯವಿಲ್ಲದೆ ಏನನ್ನಾದರೂ ಹೇಳಿಕೊಳ್ಳಬಹುದು. |

# ಮಗುವೊಂದು ಲೈಂಗಿಕ ಕಿರುಕುಳದ ಬಗ್ಗೆ ಹೇಳಿಕೊಂಡಾಗ ವಯಸ್ಕರೊಬ್ಬರು ಏನು ಮಾಡಬಹುದು

## "ಆರೈಕೆ" ಮತ್ತು "ತುರ್ತಿ"ನೊಂದಿಗೆ ಪ್ರತಿಕ್ರಿಯಿಸಿ:

ಮಗುವೊಂದು ಲೈಂಗಿಕ ಕಿರುಕುಳದ ಸನ್ನಿವೇಷದ ಬಗ್ಗೆ ಹೇಳಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಅನ್ನಿಸಿದರೆ, ತಕ್ಷಣವೇ "ಎಚ್ಚರಿಕೆ"ಯಿಂದ ಪ್ರತಿಕ್ರಿಯಿಸಿ.

## ಸನ್ನಿವೇಶವನ್ನು "ಶಾಂತವಾಗಿ" ನಿರ್ವಹಿಸಿ:

ಕಿರುಕುಳ ನೀಡುವವನು ಪರಿಚಿತನಾಗಿದ್ದರೆ, ವಯಸ್ಕರು ಸನ್ನಿವೇಶವನ್ನು ಶಾಂತವಾಗಿ ನಿರ್ವಹಿಸಬೇಕು. ಕಿರುಕುಳಕ್ಕಾಗಿ ಮಕ್ಕಳನ್ನು ಬೈಯ್ಯಬಾರದು. ಕಿರುಕುಳಕ್ಕೆ ಕಿರುಕುಳ ನೀಡಿದವನನ್ನೇ ಜವಾಬ್ದಾರನನ್ನಾಗಿಸಬೇಕು.

## ಮಗುವಿಗೆ ಸುಳ್ಳು ಭರವಸೆಗಳನ್ನು ಕೊಡಬೇಡಿ:

ಮಗುವಿಗೆ, "ಕಿರುಕುಳ ನೀಡಿದವನನ್ನು ಹೊಡೆಯುತ್ತೇನೆ", "ಯಾರೊಂದಿಗೂ ಹೇಳಿಕೊಳ್ಳಬೇಡ" ಎಂಬಂತಹ ಯಾವುದೇ ಸುಳ್ಳು ಭರವಸೆಯನ್ನು ಕೊಡಬಾರದು.

## ಮಗುವಿಗೆ ಸುರಕ್ಷಿತ ಮತ್ತು ಭದ್ರತೆಯ ವಾತಾವರಣವನ್ನು ನಿರ್ಮಿಸಿ:

ಮಗುವಿಗೆ ಭಾವನಾತ್ಮಕವಾಗಿ ಮತ್ತು ದೈಹಿಕವಾಗಿ ಮತ್ತಷ್ಟು ಹಾನಿಯಾಗುವುದರಿಂದ ರಕ್ಷಿಸಿಗ್. ಅಗತ್ಯವಿದ್ದರೆ, ತಾತ್ಕಾಲಿಕವಾಗಿ ಮಗುವನ್ನು ಬೇರೆಡೆಗೆ ಕಳುಹಿಸಿ.

## ಸಹಾಯ ಪಡೆಯಿರಿ:

ಸುರಕ್ಷತೆ ಮತ್ತು ವಾಸಿಯಾಗುವುದರತ್ತ ಸಲಹೆ ನೀಡುವಂತಹ ವೃತ್ತಿಪರರ ಸಹಾಯ ಪಡೆದುಕೊಳ್ಳಿ

# ಮಕ್ಕಳ ಲೈಂಗಿಕ ಕಿರುಕುಳವನ್ನು ವರದಿ ಮಾಡುವುದು

- ಅಪರಾಧ ನಡೆಯಬಹುದೆಂಬ ಭೀತಿಯನ್ನು ಹೊಂದಿರುವ ಅಥವಾ ಅಪರಾಧ ನಡೆದಿದೆ ಎಂಬುದನ್ನು ತಿಳಿದಿರುವ ಯಾವುದೇ ವ್ಯಕ್ತಿಯು ಪೋಲೀಸರಿಗೆ ವಿಷಯವನ್ನು ಕಡ್ಡಾಯವಾಗಿ ತಿಳಿಸಬೇಕು. ಇದರಲ್ಲಿ/ವ್ಯಕ್ತಿಗಳು/ಮಾಧ್ಯಮ ಸಿಬ್ಬಂದಿ, ಹೋಟೆಲ್/ಲಾಡ್ಜ್‌ಗಳು, ಆಸ್ಪತ್ರೆಗಳು, ಕ್ಲಬ್‌ಗಳು, ಸ್ಟುಡಿಯೋಗಳು, ಶಿಕ್ಷಕರು, ಸಾಮಾಜಿಕ ಕಾರ್ಯಕರ್ತೌ, ಫೋಟೋಗ್ರಫಿ ಸೌಲಭ್ಯಗಳೆಲ್ಲವೂ ಒಳಗೊಂಡಿವೆ.

- ಪೋಲೀಸರಿಗೆ ತಿಳಿಸಲು ವಿಫಲಾದರೆ ಅದಕ್ಕಾಗಿ ಆರು ತಿಂಗಳ ಸೆರೆವಾಸ ಅಥವಾ ದಂಡ ಅಥವ ಎರಡೂ ಶಿಕ್ಷೆಗೆ ಒಳಗಾಗಬೇಕಾಗುತ್ತದೆ.

- ಒಂದು ಮಗು ಅಥವಾ ಹೆತ್ತವರು ಅಥವಾ NGOಳು ಲೈಂಗಿಕ ಕಿರುಕುಳದ ದೂರನ್ನು ಯಾವುದೇ ಪೋಲೀಸ್ ಠಾಣೆಯಲ್ಲಿ ದಾಖಲಿಸಬಹುದು. ದೂರನ್ನು ನ್ಯಾಯಾಂಗ ಪರಿಧಿಯ ಹೊರಗೆ ದಾಖಲಿಸಿದ್ದಲ್ಲಿ, ನಂತರ FIR ಅನ್ನು ಫೈಲ್ ಮಾಡಬಹುದು ಮತ್ತುಅದನ್ನು ಸೂಕ್ತ ಪೋಲೀಸ್ ಠಾಣೆಗೆ ವರ್ಗಾವಣೆ ಮಾಡಬಹುದು.

- ಪ್ರಕರಣವನ್ನು ದಾಖಲಿಸಿಕೊಳ್ಳ ಬೇಕೇ ಬೇಡವೇ ಎಂದು ನಿರ್ಧರಿಸುವುದು ಪೋಲೀಸರಲ್ಲ. ದೂರುದಾರರು ದೂರನ್ನು ದಾಖಲಿಸುವ ಹಕ್ಕನ್ನು ಹೊಂದಿರುತ್ತಾರೆ.


- ಮಕ್ಕಳ ಕಿರುಕುಳದ ಎಲ್ಲಾ ಪ್ರಕರಣಗಳಲ್ಲಿ **FIR ದಾಖಲಿಸಿಕೊಳ್ಳುವುದು** ಪೋಲೀಸರಿಗೆ ಕಡ್ಡಾಯವಾಗಿದೆ. FIR **ದಾಖಲಿಸಿಕೊಳ್ಳಲು** ನಿರಾಕರಿಸಿದರೆ ಯಾರೇ **ಆದರೂ** ಪೋಲೀಸ್ ಸೂಪರಿಂಟೆಂ**ಡೆಂಟ್** ಅವರಿಗೆ ದೂರು ಸಲ್ಲಿಸಬ**ಹುದು,** ಅಥವಾ ನ್ಯಾ**ಯಾಲಯ** ವ್ಯಾಪ್ತಿಯ ನ್ಯಾ**ಯಾಯಲಕ್ಕೆ** ಖಾಸಗಿ **ದೂರನ್ನು** ದಾಖಲಿಸಬಹುದು.



# ಬಲಿಯಾದವರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವುದು

- ಲೈಂಗಿಕ ಕಿರುಕುಳಕ್ಕೆ ಒಳಗಾಗಿರುವ ಮಗುವು ಕಿರುಕುಳದ ಬಗ್ಗೆ ತನಿಖಾಧಿಕಾರಿಗಳೊಂದಿಗೆ ಹೇಳಿಕೊಳ್ಳಬೇಕು.
- ಪೋಲೀಸರು ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆಂದು ಮಗುವಿಗೆ ತಿಳಿಸಿ ಮತ್ತು ಮಗುವು ಅರ್ಥ ಏನನ್ನಾದರು ಮಾಡಿಕೊಳ್ಳದಿದ್ದರೆ ಅವನು/ಅವಳು ಪೋಲೀಸ್ ಅಧಿಕಾರಿಯನ್ನಾಗಲೀ ಅಥವಾ/ಹೆತ್ತವರನ್ನಾಗಲಿ/ಪೋಷಕರನ್ನಾಗಲೀ ವಿವರಗಳಿಗಾಗಿ ಕೇಳಬಹುದು.
- ಮಗುವು ಸಿದ್ಧವಾಗಿದ್ದಾಗ ಮಾತ್ರ ಮಗುವಿನ ಹೇಳಿಕೆಯನ್ನು ದಾಖಲಿಸಿಕೊಳ್ಳಬೇಕು ಮತ್ತು ಅಗ ಮಾತ್ರ ಘಟನೆಯ ವಿವರಗಳನ್ನು ನೀಡಬಲ್ಲದು.
- ಬಲಿಯಾದ ಮಗುವಿನ ಹೇಳಿಕೆಯನ್ನ್ ಆಕೆಯ/ಅವನ ಮನೆ ಅಥವಾ ಆಕೆ/ಅವನ ಆಯ್ಕೆಯ ಸ್ಥಳಗಳಲ್ಲಿ ಆಕೆಯ ಹೆತ್ತವರು ಅಥವಾ ಸಂಬಂಧಿಕರ ಎದುರಿನಲ್ಲಿ ದಾಖಲಿಸಿಕೊಳ್ಳಬಹುದು.
- ಹೇಳಿಕೆಯನ್ನು ಮಹಿಳಾ ಪೋಲೀಸ್ ಅಧಿಕಾರಿ ದಾಖಲಿಸಿಕೊಳ್ಳುವುದು ಉತ್ತಮ.
- ಮಗುವಿನ ಹೇಳಿಕೆಯನ್ನು ಪೋಲೀಸ್ ಸಬ್–ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿಯು ದಾಖಲಿಸಿಕೊಳ್ಳಬೇಕು.
- ಮಗುವಿನ ಹೇಳಿಕೆಯನ್ನು ದಾಖಲಿಸಿಕೊಳ್ಳುವಾಗ ಪೋಲೀಸ್ ಅಧಿಕಾರಿಯು ಸಮವಸ್ತ್ರದಲ್ಲಿ ಇರಬಾರದು.
- ಮಗುವಿನ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಮುಂಚೆ, ಮಗುವಿಗೆ ಕಿರುಕುಳದ ವರದಿ ದಾಖಲಿಸಿಕೊಳ್ಳುತ್ತಿರುವ ವ್ಯಕ್ತಿ ಕೆಟ್ಟವರಲ್ಲವೆಂದು ತಿಳಿಸಿ ಹೇಳಬೇಕು.
- ಯಾವುದೇ ಕಾರಣಕ್ಕೂ ಮಗುವು ಅಪರಾಧಿಯ ಅಥವಾ ಅವನ/ಅವಳ ಪ್ರತಿನಿಧಿಯೊಂದಿಗೆ ಸಂಪರ್ಕಕ್ಕೆ ಬಂದಿಲ್ಲವೆಂದು ಪೋಲೀಸ್ ಅಧಿಕಾರಿಯು ಖಚಿತ ಪಡಿಸಿಕೊಳ್ಳಬೇಕು.

- ಮಗುವಿನ ಹೇಳಿಕೆಯನ್ನು ಮಗುವು ಮಾತನಾಡಿದಂತೆ ದಾಖಲಿಸಿಕೊಳ್ಳಬೇಕು.
- ವಿವರಣೆಕಾರ ಅಥವಾ ಭಾಷಾಂತರಕಾರರ ಅಥವಾ ಪರಿಣಿತರ ಸಹಾಯವನ್ನು ಮಗುವಿನ ಅವಶ್ಯಕತೆಯಂತೆ ತೆಗೆದುಕೊಳ್ಳಬೇಕು.
- ಮಗುವು ಮಾನಸಿಕ ಅಸ್ವಸ್ಥತೆ ಹೊಂದಿದ್ದರೆ ವಿಶೇಷ ಶಿಕ್ಷಕರ ಅಥವಾ ಮಗುವಿನೊಂದಿಗೆ ಸಂವಹನ ಮಾಡುವುದರಲ್ಲಿ ಪರಿಣಿತರಾದವರ ಶಾಯವನ್ನು ತೆಗೆದುಕೊಳ್ಳಬೇಕು.
- ಮಗುವಿಗೆ ಅನಗತ್ಯ ಪ್ರಶ್ನೆ ಕೇಳಬಾರದು ಅಥವಾ ವಿವರಣೆಗಳನ್ನು ಕೊಡುವಂತೆ ಒತ್ತಡವನ್ನುಂಟುಮಾಡಬಾರದು.
- ಮಗುವು ಅನೇಕ ಸಂಧರ್ಭಗಳಲ್ಲಿ ಪುನರಾವರ್ತನೆ ಮಾಡುತ್ತಿಲ್ಲವೆಂಬುದನ್ನು ಪೋಲೀಸರು ಮತ್ತು ಹೆತ್ತವರು ಖಚಿತಪಡಿಸಿಕೊಳ್ಳಬೇಕು.
- ದಾಖಲೆ ಮಾಡಿಕೊಳ್ಳುತ್ತಿರುವಾಗ ಮಗುವಿಗೆ ಆಗಾಗ್ಗೆ ವಿರಾಮ ಕೊಡಬೇಕು.
- ಮಗುವಿನ ವಯಸ್ಸಿನ ಆಧಾರದ ಮೇಲೆ ಹೇಳಿಕೆಯನ್ನು ದಾಖಲಿಸಿಕೊಳ್ಳುತ್ತಿರುವಾಗ ಗೊಂಬೆಗಳು, ಬಣ್ಣಗಳು, ಚಾಕೊಲೇಟ್‌ಗಳು, ಆಹಾರ, ನೀರು ಇತ್ಯಾದಿಗಳ ವ್ಯವಸ್ಥೆ ಮಾಡಿರಬೇಕು.



# CSA ಪ್ರಕರಣಗಳ ಸಾಕ್ಷಿ ಕಲೆಹಾಕುವುದು

- CSA ಎಯಲ್ಲಿನ ಸಾಕ್ಷಿಗಳೆಂದರೆ– ಬಲಿಯಾದವರ ಬಟ್ಟೆಗಳು, ಅಪರಾಧಿಯ ಬಟ್ಟೆಗಳು, ಬೆಡ್ ಶೀಟ್, ಚಾಪೆ, ಬಲಿಯಾದವರು ಮತ್ತು ಅಪರಾಧಿಯ ದೇಹದ ಮೇಲಿನ ಗಾಯದ ಗುರುತು, ಮೊಬೈಲ್ ಫೋನ್, ಕ್ಯಾಮೆರಾ, ಪೆನ್ ಡ್ರೈವ್, ವಿಡಿಯೋ ರೆಕಾರ್ಡಿಂಗ್, ಯಾವುದೇ ಲಿಖಿತ ದಾಖಲೆ, ಸಾಕ್ಷಿಯ ಹೇಳಿಕೆ, ವೈದ್ಯಕೀಯ ಪರೀಕ್ಷೆಯ ವರದಿ ಇತ್ಯಾದಿಗಳು.
- ಸಾಕ್ಷಿಯನ್ನು ನಾಶಪಡಿಸಿರುವುದಿಲ್ಲ ಅಥವಾ ಹಾನಿಯಾಗಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ವಿಷೇಶ ಎಚ್ಚರಿಕೆ ವಹಿಸಬೇಕು.
- ಬಲಿಯಾದವರಿಗೆ ಸ್ನಾನ ಮಾಡಿಸಬಾರದು ಅಥವಾ ಅವರ ಬಟ್ಟೆಗಳನ್ನು ತೊಳೆಯಬಾರದು ಅದು ಪ್ರಮುಖ ಸಾಕ್ಷಿಯನ್ನು ಹಾಳು ಮಾಡಬಹುದು.
- ಪೋಲೀಸರು ತನಿಖೆಯನ್ನು ಮಾಡಿ ಪ್ರಕರಣಕ್ಕೆ ಸಂಬಂಧಿಸಿದ ಸೂಕ್ತ ಸಾಕ್ಷಿಗಳನ್ನು ಸಂಗ್ರಹಿಸಬೇಕು.
- ತನಿಖೆಯಲ್ಲಿ ಸಾಕ್ಷಿಗಾಗಿ ಅಪರಾಧಿ ದೃಶ್ಯಗಳನ್ನು ಪರೀಕ್ಷಿಸುವುದು ಒಳಗೊಂಡಿರಬಹುದು ಮತ್ತು ಘಟನೆಯ ಬಗ್ಗೆ ಮಾಹಿತಿ ನೀಡುವಂತಹ ಸಾಕ್ಷಿಗಳೊಂದಿಗೆ ಮಾತನಾಡಬೇಕಾಗಬಹುದು.
- ಅಪರಾಧ ಸ್ಥಳದಲ್ಲಿ ಸಾಕ್ಷಿಯನ್ನು ಸಂಗ್ರಹಿಸುವಾಗ ಪೋಲೀಸರು ಗ್ಲೌಸ್‌ಗಳನ್ನು ಧರಿಸಬೇಕು.
- ಅಪರಾಧ ನಡೆದ ಸ್ಥಳದಿಂದ ಸಂಗ್ರಹಿಸಿದ ಸಾಕ್ಷಿಗಳನ್ನು ಸೂಕ್ತವಾಗಿ ಪ್ಯಾಕ್ ಮಾಡಬೇಕು ಇದರಿಂದ ಸಾಕ್ಷಿಗಳಿಗೆ ಹಾನಿಯಾಗುವುದನ್ನು ತಪ್ಪಿಸಬಹುದು.
- ಒಣಗಿದ ಜೈವಿಕ ಕಲೆಗಳನ್ನು ಹೊಂದಿರುವ ಬಟ್ಟೆಗಳು (ರಕ್ತ, ವೀರ್ಯ ಅಥವಾ ರಸ) ಗಳನ್ನು ಪ್ರತ್ಯೇಕವಾಗಿ ಕಲೆಗಳು ಹಾಳಾಗದಂತೆ ಮತ್ತು ಉಜ್ಜಿ ಹೋಗದಂತೆ ಇರಿಸಬೇಕು.
- ಬಲಿಯಾದವರು ಮತ್ತು ಅಪರಾಧಿಯ ಬಟ್ಟೆಗಳನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಬೇಕು ಮತ್ತು ಅವು ಪರಸ್ಪರ ಸಂಪರ್ಕಿಸಬಾರದು.
- ಕೂದಲು ಅಥವಾ ಉಡುಪಿನ ತುಣುಕುಗಳು ಕೂದಲನ್ನು ಹೊಂದಿರುವ ಬೇರೆ ಬಟ್ಟೆಯ ಸಂಪರ್ಕಕ್ಕೆ ಬರಬಾರದು.

# CSA ಬಲಿಯಾದವರ ವೈದ್ಯಕೀಯ ತಪಾಸಣೆ

- ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಮಾಹಿತಿ ಲಭ್ಯವಾದ 24 ಗಂಟೆಗಳ ಒಳಗೆ ವೈದ್ಯಕೀಯ ತಪಾಸಣೆ ಮಾಡಬೇಕು.
- ತಪಾಸಣೆಯನ್ನು ಸರ್ಕಾರಿ ಆಸ್ಪತ್ರೆಯಲಿಯೇ ಮಾಡಬೇಕು.
- ತಪಾಸಣೆಯನ್ನು ಬಲಿಯಾದವರ ಅಥವಾ ಅವಳ/ಅವನ ಪರವಾಗಿ ಒಪ್ಪಿಗೆ ಕೊಡಲು ಸೂಕ್ತವೆನಿಸುವ ಅರ್ಹವ್ಯಕ್ತಿಯ ಒಪ್ಪಿಗೆಯನ್ನು ಪಡೆದ ನಂತರವೇ ಮಾಡಬೇಕು.
- ತಪಾಸಣೆಯನ್ನು ಮಗುವಿಗೆ ಹಿತವೆನಿಸುವಂತಹ ಕುಟುಂಬ ಸದಸ್ಯರು ಅಥವಾ ಸಾಮಾಜಿಕ ಕಾರ್ಯಕರ್ತರ ಸಮ್ಮುಖದಲ್ಲಿಯೇ ಮಾಡಬೇಕು.
- ಬಲಿಯಾದವರು ಹೆಣ್ಣು ಮಗುವಾಗಿದ್ದರೆ ವೈದ್ಯಕೀಯ ತಪಾಸಣೆಯನ್ನು ಮಹಿಳಾ ವೈದ್ಯರು ಮಾಡಬೇಕು.
- ತಪಾಸಣೆಯನ್ನು ಒಂದು ಖಾಸಗಿತನವಿರುವ ಹಿತಕರವಾದ ಮತ್ತು ಬೆಚ್ಚಗಿನ ಕೊಠಡಿಯಲ್ಲಿ ಮಾಡಬೇಕು.
- ತಪಾಸಣೆಯ ಸಮಯದಲ್ಲಿ ಮಗುವಿಗೆ ಅರ್ಧ ಬಟ್ಟೆ ಹಾಕಿರಬೇಕು ಅಥವಾ ಪೂರ್ಣವಾಗಿ ಒಂದು ಬ್ಲಾಂಕೆಟ್/ಶೀಟ್ ನಿಂದ ಮುಚ್ಚಿರಬೇಕು.
- ವೈದ್ಯರು ಮಗುವಿನ ಮೇಲೆ ಪೂರ್ಣ ತಪಾಸಣೆ ಮಾಡಬೇಕು, ತಲೆಯಿಂದ ಪ್ರಾರಂಭಿಸಿ ಉಂಗುಷ್ಟದವರೆಗೆ ಯಾವುದೇ ದೈಹಿಕ ಗಾಯಗಳು. ವಿಶೇಷವಾಗಿ ಗುಪ್ತ ಸ್ಥಳಗಳಲ್ಲಿ ಇವೆಯೆ ಎಂದು ಪರೀಕ್ಷಿಸಬೇಕು.
- ದೈಹಿಕ ಗಾಯಗಳಾಗಿರದೇ ಇರುವುದು ಮಗುವು ಲೈಂಗಿಕ ಕಿರುಕುಳಕ್ಕೆ ಒಳಗಾಗಿಲ್ಲವೆಂಬ ಅರ್ಥ ಕೊಡುವುದಿಲ್ಲ.
- ಫೊರೆನ್ಸಿಕ್ ತಪಾಸಣೆಯ ಸಮಯದಲ್ಲಿ, ವೈದ್ಯರು ಅಪರಾಧಿಯ ವಿರುದ್ಧ ಬಳಸಲು ಬೇಕಾಗುವಂತಹ ಸಾಕ್ಷಿಗಳನ್ನು ಕಲೆಹಾಕಬೇಕು.
- ತಪಾಸಣೆಯು ಮಗುವಿಗೆ ಅಸೌಕರ್ಯವೆನಿಸಿದರೆ, ವೈದ್ಯರು ಮಗುವಿಗೆ ಸಹಾಯ ಮಾಡಿ ಅವನಿಗೆ/ಅವಳಿಗೆ ಹಿತಕರವೆನಿಸುವಂತೆ ಮಾಡಬೇಕು.
- 'ಎರಡು ಬೆರಳುಗಳ' ಪರೀಕ್ಷೆಯ ವಿಧಾನದ ಬದಲಿಗೆ ವೈಜ್ಞಾನಿಕ ವಿಧಾನಗಳನ್ನು ಬಳಸಬೇಕು.

# ನ್ಯಾಯಾಲಯ ಪ್ರಕ್ರಿಯೆಗಳು

- ಮಕ್ಕಳ ಲೈಂಗಿಕ ಕಿರುಕುಳ ಪ್ರಕರಣಗಳಿಗೆ ಶಿಶು ಸ್ನೇಹಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬೇಕು.
- ವಿಶೇಷ ನ್ಯಾಯಾಲಯವು ವಿಚಾರಣೆಯನ್ನು ಒಂದು ವರ್ಷದ ಅವಧಿಯೊಳಗೆ ಮುಕ್ತಾಯಗೊಳಿಸಬೇಕು.
- ಶೀಘ್ರವಾದ ವಿಚಾರಣೆಗಾಗಿ ಮಗುವಿನ ಸಾಕ್ಷ್ಯವನ್ನು 30 ದಿನಗಳ ಅವಧಿಯೊಳಗೆ ದಾಖಲಿಸಿಕೊಳ್ಳಬೇಕು.
- ಮಗುವನ್ನು ಪರೀಕ್ಷೆಗಾಗಿ ಪದೇ ಪದೇ ಕರೆಯಬಾರದು.
- ವಿಚಾರಣೆಯ ಸಮಯದಲ್ಲಿ ಮಗುವಿಗೆ ಬಿಡುವು ಕೊಡಬೇಕು.
- ಡಿಫೆನ್ಸ್/ಎದುರಾಳಿ ವಕೀಲರು ಮಗುವಿಗೆ ನೇರವಾಗಿ ಪ್ರಶ್ನೆಗಳನ್ನು ಕೇಳಬಾರದು.
- ಡಿಫೆನ್ಸ್/ಎದುರಾಳಿ ಯು ಮೊದಲಿಗೆ ಪ್ರಶ್ನೆಗಳನ್ನು ನ್ಯಾಯಾಲಯಕ್ಕೆ ಕೊಡಬೇಕು ಅದು ಮಗುವಿಗೆ ಪ್ರಶ್ನೆಗಳನ್ನು ಕೇಳುತ್ತದೆ.
- ನ್ಯಾಯಾಲಯವು ಆಕ್ರಮಣಕಾರಿ ಅಥವಾ ಮಗುವಿನ ಮಾನಹರಣ ಮಾಡುವಂತಹ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡಬಾರದು.
- ನ್ಯಾಯಾಲಯದ ವಾತವರಣ ಶಿಶು ಸ್ನೇಹಿಯಾಗಿರಬೇಕು.
- ವಿಚಾರಣೆಯು ಕ್ಯಾಮೆರಾದಲ್ಲಿರಬೇಕು.
- ಮಗುವನ್ನು ಕರೆತರುವಾಗ ಹೆತ್ತವರು ಅಥವಾ ಕುಟುಂಬದ ಸದಸ್ಯರು ಅಥವಾ ಸಾಮಾಜಿಕ ಕಾರ್ಯಕರ್ತರು, ಯಾರು ಮಗುವಿಗೆ ಹಿತವೆನಿಸುತ್ತಾರೋ ಅವರನ್ನು ನ್ಯಾಯಾಲಯದೊಳಗೆ ಬಿಡಬೇಕು.
- ಮಗುವನ್ನು ನ್ಯಾಯಾಲಯಕ್ಕೆ ಕರೆತರುವಾಗ ಆಪಾದಿತನಿಗೆ ತೋರಿಸಬಾರದು.
- ಮಗುವನ್ನು ನ್ಯಾಯಾಯಲಕ್ಕೆ ಕರೆತರುವಾಗ ಮಗುವಿನ ವಯಸ್ಸಿಗೆ ಅನುಗುಣವಾಗಿ ಗೊಂಬೆಗಳು, ಬಣ್ಣಗಳು, ಚಾಕೊಲೇಟ್‌ಗಳು, ಆಹಾರ, ನೀರು ಇತ್ಯದಿಗಳ ವ್ಯವಸ್ಥೆಗಳನ್ನು ಕಲ್ಪಿಸಿರಬೇಕು.

# ಕಿರುಕುಳಕ್ಕೆ ಬಲಿಯಾದ ನಂತರ ಬಲಿಯಾದವರ ನಿರ್ವಹಣೆ

ಲೈಂಗಿಕ ಕಿರುಕುಳವು ಒಂದು ಭಯಾನಕ ಅನುಭವವಾಗಿದ್ದು ಅದು ಮನೆಯಲ್ಲಿ, ಕೆಲಸದಲ್ಲಿ, ಶಾಲೆಯಲ್ಲಿ ಮತ್ತು ನೆರೆಹೊರೆಯಲ್ಲಿ ಬಲಿಯಾದವರ ಜೀವನವನ್ನು ಹಾಳುಗೆಡವಬಹುದು. ಲೈಂಗಿಕ ಕಿರುಕುಳಕ್ಕೆ ಬಲಿಯಾಗಿ ಜೀವಿಸುತ್ತಿರುವವರು ಹಿಂಸೆಯ ನಂತರದಲ್ಲಿ ಪ್ರತ್ಯೇಕತೆಯನ್ನು ಅನುಭವಿಸುತ್ತಾರೆ.

**ಆ ಅನುಭವಗಳನ್ನು ಕಡಿಮೆಗೊಳಿಸಲು, ಪೋಷಕರು ಈ ಕೆಳಗಿನ ರೀತಿಯಲ್ಲಿ ಬಲಿಯಾದವರನ್ನು ಪಾರು ಮಾಡುವುದರತ್ತ ಕಾರ್ಯನಿರ್ವಹಿಸಬಹುದು:**

1. ಬಲಿಯಾದವರಿಗೆ ಸುರಕ್ಷತೆಯ "ಅನುಭವ" ನೀಡಬೇಕು, ಆ ಅನುಭವವು ಕಿರುಕುಳ ನೀಡಿದವನು ಆಕೆ/ಅವನಿಗೆ ಹಾನಿ ಮಾಡುವುದಿಲ್ಲವೆಂಬಂತಿರಬೇಕು.
2. ಆಕೆ/ಅವನಿಗೆ ಶೀಘ್ರದಲ್ಲಿಯೇ "ದಿನ ನಿತ್ಯದ ಜೀವನ" ಕ್ಕೆ ಹಿಂದಿರುಗಲು ಸಹಾಯ ಮಾಡಿ ಅಂದರೆ ಶಾಲೆಗೆ ಹೋಗಲು ಸಹಾಯ ಮಾಡುವುದು, ಇತರೆ ಮಕ್ಕಳೊಂದಿಗೆ ಆಟವಾಡುವುದು, ಟಿವಿ ನೋಡುವುದು ಇತ್ಯಾದಿ
3. ಬಲಿಯಾದವರು ಪ್ರತ್ಯೇಕವಾಗಿಲ್ಲವೆಂಬುದನ್ನು ಅಥವಾ "ಪ್ರತ್ಯೇಕತಾ ಭಾವನೆ" ಹೊಂದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಿ.
4. ಬಲಿಯಾದವರನ್ನು "ಸ್ವೀಕೃತರಾಗಿದ್ದಾರೆ" ಎಂಬ ಭಾವನೆಯ ವಾತಾವರಣವನ್ನು ನಿರ್ಮಾಣ ಮಾಡಿ.
5. ಬಲಿಯಾದವರು "ಸಾಮಾನ್ಯ" ಎಂಬ ಅನುಭ ಪಡೆದುಕೊಳ್ಳಲು ಸಹಾಯ ಮಾಡಿ. ಬಲಿಯಾದವರು ಅವಳು/ಅವನು ಬೇರೆಯ ಮಕ್ಕಳಿಗಿಂತ ಭಿನ್ನ ಎಂಬ ಭಾವನೆ ಬೆಳೆಸಿಕೊಳ್ಳದಂತೆ ನೋಡಿಕೊಳ್ಳಿ.
6. ಬಲಿಯಾದವರಿಗೆ ಕಿರುಕುಳದ ಬಗ್ಗೆ ಹೇಳಿಕೊಂಡದ್ದಕ್ಕಾಗಿ ಮತ್ತು ಕಿರುಕುಳ ನೀಡಿದವರ ವಿರುದ್ಧ ತೆಗೆದುಕೊಂಡ ಕಾನೂನು ಕ್ರಮಗಳಿಂದಾಗಿ "ಅಪರಾಧಿ" ಭಾವನೆ ಮೂಡುವಂತೆ ಮಾಡಬೇಡಿ.
7. ಬಲಿಯಾದವರು ಮತ್ತು ಕುಟುಂಬದವರಿಗೆ "ಬೆಂಬಲ ಮತ್ತು ಅನುಕೂಲತೆ" ಒದಗಿಸಿ.
8. ಮಗು ಮತ್ತು ಕುಟುಂಬದವರನ್ನು ವೃತ್ತಿಪರ ಸೇವೆಗಳೊಂದಿಗೆ ಸಂಪರ್ಕಿಸಿ ಅದು ಅವನು/ಅವಳನ್ನು ಸುರಕ್ಷಿತವಾಗಿಸುತ್ತದೆ, ಅವರು ಆಘಾತದಿಂದ ಚೇತರಿಸಿಕೊಳ್ಳಲು ಸಹಾಯ ಮತ್ತು ಬೆಂಬಲ ನೀಡಿ.

# ಭಾಗೀದಾರರ ಪಾತ್ರ

## I. ಸಮಾಲೋಚಕರು:

- **ಕೇಳಿ:** ಮಗು ಏನು ಹೇಳುತ್ತಿದೆ ಅಥವಾ ಹೇಳ ಬಯಸುತ್ತಿದೆ.
- **ನಂಬಿ:** ಮಗು ಏನು ಹೇಳುತ್ತದೋ ಅದನ್ನು.
- **ತನಿಖೆ ಮಾಡಿ:** ಮಗು ಏನು ಹೇಳುತ್ತದೋ ಅದನ್ನು.
- **ಅರ್ಥ ಮಾಡಿಕೊಳ್ಳಿ:** ಮಗು ಏನು ಹೇಳುತ್ತದೋ ಅದನ್ನು.
- **ಪ್ರೋತ್ಸಾಹಿಸಿ:** ಮಗು ಕಿರುಕುಳ ಮತ್ತು ಕಿರುಕುಳ ನೀಡುವವನ ಬಗ್ಗೆ ಹೇಳುವುದನ್ನು.
- **ಹೇಳಿ/ಮಾಹಿತಿ ನೀಡಿ:** ಹೆತ್ತವರು, ಅಥವಾ ಪ್ರಾಂಶುಪಾಲರು, ಅಥವಾ NGO.

**"ಸಾಮಲೋಚಕರು ಮಕ್ಕಳು ಯಾವುದೇ ಹೆದರಿಕೆ, ಹಿಂಜರಿಕ ಅಥವಾ ತಾರತಮ್ಯತೆ ಇಲ್ಲದೆ ಉತ್ತರಿಸಲು ಸ್ಥಳಾವಕಾಶ ಒದಗಿಸಿಕೊಡಬೇಕು"**

## II. ಶಿಕ್ಷಕರು:

- **ಗಮನಿಸಿ:** ಬಾಹ್ಯ ವರ್ತನೆಗಳನ್ನು ತೋರುವ ಮಕ್ಕಳು (ಆಕ್ರಮಣಕಾರಿ, ಕೋಪ, ಶಾಲಾಕೆಲಸದ ಮೇಲೆ ಮನಸ್ಸನ್ನು ಕೇಂದ್ರೀಕರಿಸಲು ತೊಂದರೆ, ಮತ್ತು ಲೈಂಗಿಕ ರೀತಿಯ ವರ್ತನೆ), ಮತ್ತು ಅಂತರ್ಮುಖಿ ವರ್ತನೆ (ಉದ್ವೇಗ, ಖಿನ್ನತೆ, ಹಿಂಜರಿಕೆ ಮತ್ತುಆಘಾತದ ನಂತರದಲ್ಲಿ ಒತ್ತಡ ಏರುಪೇರಾಗುವುದು).
- **ಮಕ್ಕಳೊಂದಿಗೆ ಸಂಬಂಧವನ್ನು ಗಟ್ಟಿಗೊಳಿಸಿ:** ಮಕ್ಕಳು ತಮ್ಮನ್ನು ತಾವು ಅಭಿವ್ಯಕ್ತಪಡಿಸಿಕೊಳ್ಳಲು ಅವಕಾಶ ನೀಡಿ.
- **ಎಚ್ಚರಿಕೆಯಿಂದಿರಿ:** ಮಕ್ಕಳ ವರ್ತನೆಯಲ್ಲಿ ಬದಲಾವಣೆಯಾದಾಗ.

- **ಹೇಳಿಕೊಳ್ಳಿ:** ಹಿರಿಯ ಸಿಬ್ಬಂದಿಯೊಂದಿಗೆ, ಸಮಾಲೋಚಕರೊಂದಿಗೆ, ಹೆತ್ತವರೊಂದಿಗೆ, NGO ಗಳೊಂದಿಗೆ. ಮಕ್ಕಳ ಸಂಧರ್ಭಗಳನ್ನು ತನಿಖೆ ಮಾಡದೇ ಇರುವುದು ಬಹಳ ಮುಖ್ಯವಾದುದು, ಏಕೆಂದರೆ, ಪೋಲೀಸರು ಮತ್ತು ಮಕ್ಕಳ ಕಲ್ಯಾಣ ಸಂಸ್ಥೆಗಳು ಈ ಕೆಲಸವನ್ನು ಅಧಿಕೃತವಾಗಿ ಮಾಡುತ್ತವೆ.

- **ವರದಿ ಮಾಡಿ (ತಿಳಿಸಿ):** ಕಿರುಕುಳವಾಗುತ್ತಿದ್ದರೆ, ಪೋಲೀಸರಿಗೆ ತಿಳಿಸಿ.

**"ಲೈಂಗಿಕ ಕಿರುಕುಳವನ್ನು ಎದುರಿಸುತ್ತಿರುವ ಅಥವಾ ಎದುರಿಸುವ ಸಂಭವ ಇರುವ ಮಗುವಿಗೆ ಶಾಲೆಯಲ್ಲಿ ಸ್ಥಿರತೆ ಮತ್ತು ಭದ್ರತೆಯ ವಾತಾವರಣವನ್ನು ನಿರ್ಮಿಸಿಕೊಡಬೇಕು"**

## III. ಹೆತ್ತವರು:

- ನಿಮ್ಮ ಮಗುವಿನೊಂದಿಗೆ ಸ್ನೇಹದಿಂದಿರಿ: ನಿಮ್ಮ ಮಗುವಿನೊಂದಿಗೆ ಮಕ್ಕಳ ಚಟುವಟಿಕೆಗಳು, ಭಾವನೆಗಳು, ಒಳ್ಳೆಯದು ಅಥವಾ ಕೆಟ್ಟದ್ದು, ತಮಾಷೆ ಅಥವಾ ದುಃಖ, ಸುಲಭ ಅಥವಾ ಕಠಿಣತೆ; ಅವರು ಹೆದರಿಕೊಂಡಿರುವ ವ್ಯಕ್ತಿಯ ಬಗ್ಗೆ, ನಾಚಿಕೆ, ಕೋಪ ಅಥವಾ ಅಸೌಖ್ಯತೆಯ ಬಗ್ಗೆ ಮಾತನಾಡಿ. ನಿಮ್ಮ ಮಗುವಿನೊಂದಿಗೆ ಚಟುವಟಿಕೆಗಳನು ಮಾಡುತ್ತಾ, ಆಟವಾಡುತ್ತಾ, ಚರ್ಚಿಸುತ್ತಾ, ಹೇಳಿಕೊಳ್ಳುತ್ತಾ ಮತ್ತು ಮಾತನಾಡುತ್ತಾ ಸಮಯ ಕಳೆಯಿರಿ.
- ಗಮನಿಸುತ್ತಿರಿ ಮತ್ತು ಎಚ್ಚರಿಕೆಯಿಂದಿರಿ: ನಿಮ್ಮ ಮಗುವಿನ ವರ್ತನೆ ಬದಲಾವಣೆಯಾದಾಗ.
- ಅನುಕೂಲಕರ ವಾತಾವರಣ ನಿರ್ಮಾಣ ಮಾಡಿ: ನಿಮ್ಮ ಮಗುವು ಹೇಳಿಕೊಳ್ಳಲು, ಸಂವಹನ ಮಾಡಲು ಮತ್ತು ಸುರಕ್ಷತೆಯನ್ನು ಅನುಭವಿಸಲು ಅನುವು ಮಾಡಿಕೊಡಿ.
- ನಿಮ್ಮ ಮಗುವಿಗೆ ಮಾಹಿತಿ ತಿಳುವಳಿಕೆಯನ್ನು ಮೂಡಿಸಿ: ದೇಹದ ಖಾಸಗೀ ಅಂಗಗಳ ಬಗ್ಗೆ; ಅದನ್ನು ಯಾರೂ ಮುಟ್ಟಬಾರದು, ನೋಡಬಾರದು, ತೋರಿಸಬಾರದು ಅಥವಾ ಫೋಟೋತೆಗೆಯಬಾರದು ಎಂದು ತಿಳಿಸಿ. ಕೆಟ್ಟಗುಟ್ಟುಗಳನ್ನು ಮುಚ್ಚಿಡಬಾರದು, ಧೀರ್ಘಕಾಲದವರೆಗೆ, ಜೀವನ ಪೂರ್ತಿ ಮತ್ತು ಹೇಳಲೇ ಬಾರದೆಂಬ ಇಬ್ಬರ ನಡುವಿನ ಗುಟ್ಟುಗಳು.
- ಕೇಳಿಸಿಕೊಳ್ಳಿ: ನಿಮ್ಮ ಮಗುವು ಏನು ತಿಳಿಸಲು ಬಯಸುತ್ತಿದೆ ಎಂಬುದನ್ನು, ನಿಮಗೆ ಹೆದರಿಕೆ ಇಲ್ಲದೆ ಅಥವಾ ಅಸೌಖ್ಯದ ಅನುಭವಗಳು ಅಥವಾ ವ್ಯಕ್ತಿಗಳ ಬಗ್ಗೆ ನಿಮಗೆ ತಿಳಿಸಲು.
- ನಂಬಿ: ನಿಮ್ಮ ಮಗುವು ಹೇಳುವುದನ್ನು ನೀವು ನಂಬುವುದನ್ನು ವಿವರಿಸಿ.
- ಸಹಾಯ ಪಡೆದುಕೊಳ್ಳಿ: ನಿಮ್ಮ ಮಗುವಿನ ವರ್ತನೆಯಲ್ಲಿ ಏನಾದರೂ ಅಸಮರ್ಪಕತೆ ಕಂಡುಬಂದರೆ ಸಮಾಲೋಚಕರನ್ನು ಅಥವಾ ಮಕ್ಕಳೊಂದಿಗೆ ಕೆಲಸ ಮಾಡುವ NGO

ಸಂಪರ್ಕಿಸಿ.

- ವರದಿ ಮಾಡಿ (ತಿಳಿಸಿ): ಮಗುವು ಕಿರುಕುಳದ ಬಗ್ಗೆ ಹೇಳುತ್ತಿದ್ದರೆ ಪೋಲೀಸರಿಗೆ ತಿಳಿಸಿ.
- ವಿಶೇಷ ಸೇವೆಗಳಿಗೆ ತಿಳಿಸಿ: ಮಗುವು ಕಿರುಕುಳವನ್ನು ತಿಳಿಸಿದರೆ, ಮಗುವನ್ನು ಸಮಾಲೋಚಕರು, ಆರೈಕೆ, ಮತ್ತು ಬೆಂಬಲಕ್ಕಾಗಿ ಕರೆದುಕೊಂಡು ಹೋಗಿ.

**"ಮಗುವಿನ ನಂಬಿಕೆ ಮತ್ತು ಹೆದರಿಕೆ ಅವನ/ಅವಳ ಪೋಷಕರಿಗೆ ಹೆಚ್ಚು. ಅವನ/ಆಕೆಯು ಕಿರುಕುಳದ ಬಗ್ಗೆ ಹೇಳುತ್ತಿದ್ದರೆ ಆಕೆಗೆ/ಅವನಿಗೆ ತಿಳಿದಿರುವ ಪ್ರತಿಕ್ರಿಯೆಗಳ ಆಧಾರದ ಮೇಲೆ ಕಿರುಕುಳದ ಬಗ್ಗೆ ತಿಳಿದಿರುವುದು, ಹೆತ್ತವರೊಂದಿಗೆ ಹೇಳಿಕೊಂಡಿರುವುದು."**

## IV. ಸಮುದಾಯ:

- **ಎಚ್ಚರಿಕೆಯಿಂದಿರಿ:** ಯಾವುದೇ ಕ್ರಿಯೆ, ವರ್ತನೆ, ವ್ಯಕ್ತಿಯು ಮಗುವಿಗೆ ಹಾನಿ ಮಾಡಬಹುದು.
- **ಸುರಕ್ಷತಾ ಕ್ರಮಗಳನ್ನು ನಿರ್ಮಿಸಿ:** ಸಮುದಾಯದಲ್ಲಿ ಮಗುವಿಗೆ ಬೀದಿದೀಪಗಳು, ಯಾರೂ ಇಲ್ಲದ ಸ್ಥಳದಲ್ಲಿ ಯಾರಾದರೂ ಜೊತೆಯಲ್ಲಿರುವುದು; ಹೊರಗಿನವರನ್ನು ಪರೀಕ್ಷಿಸುವುದು, ಸ್ಥಳೀಯ ಸಮಾಜವಿರೋಧಿ ವ್ಯಕ್ತಿಗಳು, ವ್ಯಸನಿಗಳು ಇತ್ಯಾದಿ.
- **ವರದಿ ಮಾಡಿ (ತಿಳಿಸಿ):** ಯಾವುದೇ ಅನುಮಾನಾಸ್ಪದ ವ್ಯಕ್ತಿಯಿದ್ದರೆ, ಲೈಂಗಿಕ ಕಿರುಕುಳದ ಘಟನೆ ಇದ್ದರೆ ಪೋಲೀಸರಿಗೆ ತಿಳಿಸಿ.
- **ತಿಳುವಳಿಕೆ ಪಡೆಯಿರಿ:** ಮತ್ತು ಕಾನೂನುಗಳ ಬಗ್ಗೆ ಮಹಿತಿ ನೀಡಿ ಮತ್ತು ಮಕ್ಕಳ ಲೈಂಗಿಕ ಕಿರುಕುಳದ ಪ್ರಕರಣಗಳನ್ನು ನಿರ್ವಹಿಸುವುದು ಹೇಗೆ ಎಂಬುದರ ಬಗ್ಗೆ.
- **ಪುನರ್ ಸಂಯೋಜನೆ:** ಬಲಿಯಾದವರನ್ನು ಅಥವಾ ಕುಟುಂಬದವರನ್ನು ಕಿರುಕುಳಕ್ಕಾಗಿ ನಿಂದಿಸಬೇಡಿ. ಮಗುವಿಗೆ ಮತ್ತು ಕುಟುಂಬದವರಿಗೆ ಅವರು ಮತ್ತೆ ಸಾಮಾನ್ಯ ಜೀವನಕ್ಕೆ ಮರಳುವಂತೆ ಬೆಂಬಲ ನೀಡಿ.

**"ಸಮುದಾಯದ ಎಚ್ಚರಿಕೆ ಮತ್ತು ಮಾಹಿತಿ ನೀಡುವುದು ಮಗುವನ್ನು ಸುರಕ್ಷಿತವಾಗಿರಿಸಬಲ್ಲದು".**

# ಪ್ರಕರಣ ಕಾಯಿದೆಗಳು

## a) ವಿಡಿಯೋ ಕಾನ್ಫರೆನ್ಸಿಂಗ್(ಸಮಾಲೋಚನೆ):

**ಮಹಾರಾಷ್ಟ್ರ ರಾಜ್ಯ ತ ಆಡಿ. ಪ್ರಫುಲ್ ಃ ದೇಸಾಯಿ,** [2003] 4 **ಸೆಕ್ಷನ್** 601.

ನ್ಯಾಯಾಲಯದ ಮುಂದೆ ಇಡೀ ತನಿಖೆಯು ಸತ್ಯವನ್ನು ಹೊರತಂದಿತು, ಇಡೀ ಘಟನೆಯ ಬಗ್ಗೆ ಬಲಿಯಾದವರು ಅಥವಾ ಸಾಕ್ಷಿಗಳು ಮುಕ್ತವಾತಾವರಣದಲ್ಲಿ ಯಾವುದೇ ಮುಜುಗರವಿಲ್ಲದೆ, ಹೇಳುವುದು ಅತ್ಯಗತ್ಯವಾದುದು. ಸೆಕ್ಷನ್ 273 Cr.P.C. ಯು ಕೇವಲ ಸಾಕ್ಷಿಯನ್ನು ಮಾತ್ರ ಅಪರಾಧಿಯ ಮುಂದೆ ತರುವಂತೆ ಕೋರುತ್ತದೆ. ಈ ಸೆಕ್ಷನ್, ಸಾಕ್ಷಿಯನ್ನು ದಾಖಲಿಸಿಕೊಳ್ಳಬೇಕೆಂದು ಹೇಳುವುದಿಲ್ಲ. ಸೆಕ್ಷನ್ ಹೇಳುವಂತೆ ಅಪರಾಧಿಯು ಬಲಿಯಾದವರ ಅಥವಾ ಸಾಕ್ಷಿಯ ಪೂರ್ಣ ನೋಟವನ್ನು ಹೊಂದಬೇಕೆಂದು ಹೇಳುವುದಿಲ್ಲ. ಸಾಕ್ಷಿಗಳ ದಾಖಲೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಸೆಕ್ಷನ್ 273 Cr.P.C. ಅನುಸಾರ ಮಾಡಲು ಅನುಮತಿ ಇರುತ್ತದೆ.

## b) ಕ್ಯಾಮೆರಾ ಮೂಲಕ ವಿಚಾರಣೆ:

**ಪಂಜಾಬ್ ರಾಜ್ಯ ತ ಗುರ್ಮಿಟ್ ಸಿಂಗ್,** [1996] 2 **ಖಅಅ** 384.

ನ್ಯಾಯಾಲಯವು 327(2) ಮತ್ತು (3) Cr.P.C. ಯ ಪ್ರಾಮುಖ್ಯತೆಯನ್ನು ಎತ್ತಿಹಿಡಿದಿದೆ ಮತ್ತು ಒಂದು ನಿರ್ದೇಶನವನ್ನು ನೀಡಿ ಮೇಲ್ಕಾಣಿಸಿದ ನಿಬಂಧನೆಯ ಕಡ್ಡಾಯವನ್ನು ಮಾನಭಂಗದ ಪ್ರಕರಣಗಳ ವಿಚಾರಣೆ ಕ್ಯಾಮೆರಾದಲ್ಲಿ ಮಾಡಲು ಕಡೆಗಣಿಸುವಂತಿಲ್ಲ ಎಂದಿದೆ. ಕ್ಯಾಮೆರಾದಲ್ಲಿನ ಇಂತಹ ವಿಚಾರಣೆಗಳು ಬಲಿಯಾದವರಿಗೆ ಸ್ವಲ್ಪಮಟ್ಟಿಗೆ ಅನುಕೂಲಕರವಾದುದೆಂದು ಮತ್ತು ಪ್ರಶ್ನೆಗಳಿಗೆ ಉತ್ತರಿಸುವುದು ಹೆಚ್ಚು ಅನುಕೂಲಕರವೆಂದು ಮತ್ತು ಇದರಿಂದ ಸಾಕ್ಷಿಯ ಗುಣಮಟ್ಟವು ಉತ್ತಮಗೊಳ್ಳುತ್ತದೆ ಇದು ಫಿರ್ಯಾದುದಾರರಿಗೆ ಅಷ್ಟೊಂದು ಹಿಂಜರಿಕೆಯನ್ನುಂಟು ಮಾಡುವುದಿಲ್ಲ ಹಾಗೂ ಆಕೆ ಮುಕ್ತವಾಗಿ ಸಾರ್ವಜನಿಕವಾಗಿ ತೆರೆದ ಕೋರ್ಟ್‌ಗಿಂತ ಉತ್ತಮವಾಗಿ ನುಡಿಯಬಹುದೆಂದು ಗುರುತಿಸಿದೆ. ಅದು ಮುಂದುವರಿದು ನಿರ್ದೇಶನ ನೀಡುತ್ತಾ ಇಂತಹ ಪ್ರಕರಣಗಳ ವಿಚಾರಣೆಯನ್ನು ಸಾಧ್ಯವಾದಷ್ಟೂ ಮಹಿಳಾ ನ್ಯಾಯಾಧೀಶರು ನಡೆಸಬೇಕು ಇದರಿಂದ ಫಿರ್ಯಾದುದಾರರು ಹೇಳಿಕೆಗಳನ್ನು ಉತ್ತಮವಾಗಿ ನೀಡಿ ನ್ಯಾಯಾಲಯವು ಸತ್ಯವನ್ನು ಅಳಿಸದೆ ಕಠಿಣ ಸಂಧರ್ಭಗಳಲ್ಲೂ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಬಹುದಾಗಿದೆ ಎಂದಿದೆ.

## c) ಬಲಿಯಾದವರ ತೀವ್ರ ವಿಚಾರಣೆ:

**ಸಾಕ್ಷಿ ವಿ/ಎಸ್ ಯೂನಿಯನ್ ಆಫ್ ಇಂಡಿಯಾ AIR 2004 ಖಿ 3566**
**ಮಕ್ಕಳ ಲೈಂಗಿಕ ಕಿರುಕುಳ ಅಥವಾ ಮಾನಭಂಗ ವಿಚಾರಣೆ ಮಾಡುವಾಗ:**

**A.** ಒಂದು ಪರದೆ ಅಥವಾ ಬಲಿಯಾದವರು ಅಥವಾ ಸಾಕ್ಷಿಯು ಕಾಣದಂತೆ ವ್ಯವಸ್ಥೆ ಮಾಡಿರಬೇಕು (ಅವರೂ ಕೂಡ ಬಲಿಯಾದವರಂತೆಯೇ ದಮನಿತ ಸಮುದಾಯದವರಾಗಿರಬಹುದು) ಅವರು ಅಪರಾಧಿಯ ದೇಹ ಅಥವಾ ಮುಖವನ್ನು ನೋಡಬಾರದು;

**B.** ತೀವ್ರ ವಿಚಾರಣೆಯಲ್ಲಿ ಅಪರಾಧಿಯ ಪರವಾಗಿ ಕೇಳಲಾಗುವ ಪ್ರಶ್ನೆಗಳು, ಅವು ನೇರವಾಗಿ ಘಟನೆಗೆ ಸಂಬಂಧಿಸಿರುವುದರಿಂದ ಅವುಗಳನ್ನು ನ್ಯಾಯಾಲಯ ಅಧ್ಯಕ್ಷ ಅಧಿಕಾರಿಗೆ ಲಿಖಿತವಾಗಿ ನೀಡಬೇಕು ಅವರು ಅವುಗಳನ್ನು ಬಲಿಯಾದವರಿಗೆ ಅಥವಾ ಸಾಕ್ಷಿಗಳಿಗೆ ಅವರಿಗೆ ಸ್ಪಷ್ಟವಾಗಿ ತಿಳಿಯುವ ಭಾಷೆಯಲ್ಲಿ ಮತ್ತು ಕಿರಿಕಿರಿಯಾಗದಂತೆ ಕೇಳುತ್ತಾರೆ;

**C.** ಮಕ್ಕಳ ಲೈಂಗಿಕ ಕಿರುಕುಳ ಅಥವಾ ಮಾನಭಂಗಕ್ಕೆ ಬಲಿಯಾದವರು, ನ್ಯಾಯಾಲಯಕ್ಕೆ ಪುರಾವೆಯನ್ನು ನೀಡುವಾಗ ಅವರಿಗೆ ಅಗತ್ಯವಿದ್ದಾಗ ಸಾಕಷ್ಟು ಬಿಡುವನ್ನು ನೀಡಬೇಕು.

## d) ಬಲಿಯಾದವರ ವೈದ್ಯಕೀಯ ತಪಾಸಣೆ ಮತ್ತು ಹೇಳಿಕೆಗಳ ದಾಖಲಾತಿ:

**ದಿಲೀಪ್ ವಿ/ಎಸ್ M.P ರಾಜ್ಯ 2013 STPL (ವೆಬ್) 343 SC**

ಅದು ರಾಜ್ಯ ಪ್ರಾಧಿಕಾರಗಳಿಗೆ ಕಡ್ಡಾಯವಾಗಿದೆ ವಿಶೇಷವಾಗಿ, ಪೋಲೀಸ್ ಮಹಾ ನಿರ್ದೇಶಕರು ಮತ್ತು ರಾಜ್ಯ ಗೃಹ ಸಚಿವರು ಸರಿಯಾದ ಮಾರ್ಗದರ್ಶನ ನೀಡಿ ಇತರೆ ಪ್ರಾಧಿಕಾರಗಳು ಇಂತಹ ಪ್ರಕರಣಗಳನ್ನು ಹೇಗೆ ನಿರ್ವಹಿಸಬೇಕು ಮತ್ತು ಪಿರ್ಯಾದುದಾರರನ್ನು ಯಾವರೀತಿಯಲ್ಲಿ ನಡೆಸಿಕೊಳ್ಳಬೇಕು ಎಂಬುದನ್ನು ತಿಳಿಸಬೇಕು, ಲೈಂಗಿಕ ದೌರ್ಜನ್ಯಕ್ಕೊಳಗಾದವರಿಗೆ ಸಮಾಜದಿಂದ ಮಾತ್ರವಲ್ಲ ರಾಜ್ಯ ಸರ್ಕಾರದಿಂದಲೂ ಸಹ ಪೂರ್ಣ ಭಿನ್ನವಾದ ನಡವಳಿಕೆಯ ಅಗತ್ಯವಿರುತ್ತದೆ. ಮಾನಭಂಗಕ್ಕೆ ಬಲಿಯಾದವರನ್ನು ಪರೀಕ್ಷಿಸುವಾಗ ಕೆಲವು ಎಚ್ಚರಿಕೆಗಳನ್ನು ವೈದ್ಯರೂ ಸಹ ತೆಗೆದುಕೊಳ್ಳಬೇಕಾಗಿರುತ್ತದೆ. ಮಾನಭಂಗಕ್ಕೆ ಬಲಿಯಾದವರನ್ನು ಮಹಿಳಾ ವೈದ್ಯರು ಸಾಮಾನ್ಯವಾಗಿ ಪರೀಕ್ಷೆ ಮಾಡಬೇಕು. ಅದೇ ಸಮಯದಲ್ಲಿ ಆಕೆಗೆ ಮನೋವೈದ್ಯಕೀಯ ಸಹಾಯವನ್ನೂ ನೀಡಬೇಕು. ವೈದ್ಯಕೀಯ ವರದಿಯನ್ನು ತ್ವರಿತವಾಗಿ ತಯಾರಿಸಬೇಕು ಮತ್ತು ವೈದ್ಯರು ಮಾನಭಂಗಕ್ಕೆ ಬಲಿಯಾದವರನ್ನು ತೀವ್ರವಾಗಿ ಪರೀಕ್ಷಿಸಬೇಕು ಮತ್ತು ಎಲ್ಲಾ ಸಂಭವನೀಯ ಕೋನಗಳಿಂದ ಆಕೆಯ/ಅವನ ಅಭಿಪ್ರಾಯವನ್ನು ನೀಡಬೇಕು ಉದಾ. ಹಲ್ಲುಗಳ ಸಂಖ್ಯೆಗಳನ್ನು ಪರಿಗಣಿಸಿ ವಯಸ್ಸಿಗೆ ಸಂಬಂಧಿಸಿದಂತೆ ಅಭಿಪ್ರಾಯ, ದ್ವಿತೀಯ ಲೈಂಗಿಕ ಪಾತ್ರಗಳು, ಮತ್ತು ರೇಡಿಯಾಲಜಿ ಪರೀಕ್ಷೆ ಇತ್ಯಾದಿ. ವಿಚಾರಣಾಧಿಕಾರಿಗಳು ಬಲಿಯಾದವರನ್ನು ಇಂತಹ ಅಧಿಕಾರಿಗಳ ಲಭ್ಯತೆಯನ್ನಾಧರಿಸಿ ಮಹಿಳಾ ಪೋಲೀಸ್ ಅಧಿಕಾರಿ/ಗಳಿಂದ ಎಚ್ಚರಿಕೆಯಿಂದ ನಿರ್ವಹಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಬಲಿಯಾದವರನ್ನು ವೈದ್ಯಕೀಯ ತಪಾಸಣೆಗಾಗಿ ಬೇಗನೇ ಕಳಿಸಬೇಕು ಮತ್ತು ಆಕೆಯ ಹೇಳಿಕೆಯನ್ನು ತಪಾಸಣಾಧಿಕಾರಿಗಳು ಸಂಭೋಗದ ಪ್ರಕರಣಗಳಲ್ಲಿ ಆಕೆಯ ಕುಟುಂಬದ ಸದಸ್ಯರ ಸಮ್ಮುಖದಲ್ಲಿ ಆಕೆಯ ಹೇಳಿಕೆಯನ್ನು ದಾಖಲಿಸಿಕೊಳ್ಳಬೇಕು. ತಪಾಸಣೆಯು ಆದಷ್ಟು ಬೇಗನೆ ಮುಕ್ತಾಯಗೊಳ್ಳಬೇಕು ಇದರಿಂದ ಅಪರಾಧಿಯು ತಾಂತ್ರಿಕತೆಯ ಆಧಾರದ ಸೆಕ್ಷನ್ 167 Cr.P.C ಯಡಿಯಲ್ಲಿ ಜಾಮೀನು ಪಡೆಯುವುದನ್ನು ತಪ್ಪಿಸಬಹುದು ಮತ್ತು ಅಂತಿಮ ವರದಿಯನ್ನು ಸೆಕ್ಷನ್173 Cr.P.C ಅಡಿಯಲ್ಲಿ ಬೇಗನೆ ಸಲ್ಲಿಸಬೇಕು.

# ಉಲ್ಲೇಖಗಳು


ದೇವದಾಸಿ ಪದ್ದತಿ: ಸಾಮಾಜಿಕ ಆಯಾಮ, ಪ್ರತಿಕ್ರಿಯೆ ಮತ್ತು ನಿರ್ಬಂಧಗಳು.
**ಸೆಂಟರ್ ಫಾರ್ ಕ್ರಿಮಿನಾಲಜಿ ಅಂಡ್ ಜಸ್ಟೀಸ್ಫ್ ಸ್ಕೂಲ್ ಆಫ್ ಸೋಷಿಯಲ್ ವರ್ಕ್, ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೈನ್ಸಸ್, ಮುಂಬೈ 2018.**

'ದೇವ ದಾಸಿ' ಮೀಸಲು ಬಿಡುವ ವಿದ್ಯಮಾನದ ಕಾನೂನಾತ್ಮಕ ಆಯಾಮದ ಗುಣಾತ್ಮಕ ಅಧ್ಯಯನ.
**ಸೆಂಟರ್ ಫಾರ್ ಚೈಲ್ಡ್ ಅಂಡ್ ದ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ನಾಗರಭಾವಿ, ಬೆಂಗಳೂರು, 2018.**

ಕಾನೂನು ಜಾರಿ ಸಂಸ್ಥೆಗಳು, ಸರ್ಕಾರ ಮತ್ತು ಸರ್ಕಾರೇತರ –ಸೇವಾ ನೀಡಿಕೆದಾರರಿಗೆ, ವ್ಯಕ್ತಿಗಳನ್ನು ಹಣಕ್ಕಾಗಿ ಲೈಂಗಿಕ ಶೋಷಣೆಗೆ ಕಳ್ಳಸಾಗಣೆ ಮಾಡುವುದರ ಮೇಲಿನ ಗುಣಮಟ್ಟದ ನಿರ್ವಹಣಾ ಪ್ರಕ್ರಿಯೆಗಳು.
**ಪ್ರಕಟಣೆ Arz ಇವರಿಂದ(ಅನನ್ಯ ರಹಿತ್ ಜಿಂದಗಿ) 2016**

ಲೈಂಗಿಕ ಹಿಂಸೆ– ಪೋಷಕರಿಗೆ ಮತ್ತು ಸೇವಾ ನೀಡಿಕೆದಾರರಿಗೆ ಒಂದು ಕೈಪಿಡಿ.
**ಪ್ರಕಟಣೆ Arz ಇವರಿಂದ(ಅನನ್ಯ ರಹಿತ್ ಜಿಂದಗಿ) 2015**

ಮಕ್ಕಳ ಲೈಂಗಿಕ ಕಿರುಕುಳ– ಪೋಷಕರಿಗೆ ಒಂದು ಕೈಪಿಡಿ.
**ಪ್ರಕಟಣೆ Arz ಇವರಿಂದ(ಅನನ್ಯ ರಹಿತ್ ಜಿಂದಗಿ) 2015**

**ಜಸ್ಟೀಸ್ YV ಚಂದ್ರಚೂಡ್ ಮತ್ತು VR ಮನೋಹರ್, 2004.**

ಭಾರತೀಯ ದಂಡ ಸಂಹಿತೆ, 1860,
**9 ನೇ ಆವೃತ್ತಿ: ರತನ್ ಲಾಲ್ ಮತ್ತು ಧೀರಜ್ ಲಾಲ್.**
**SC ಸರ್ಕಾರ್ ಮತ್ತು PC ಸರ್ಕಾರ್, 2005.**

ಭಾರತೀಯ ದಂಡ ಸಂಹಿತೆ,
**8 ನೇ ಆವೃತ್ತಿ: ವಾಧ್ವಾ ಮತ್ತು ಕಂಪನಿ ನಾಗ್ಪುರ್.**
**ದ ಟೆಡ್ಡಿಬೇರ್ ಕ್ಲಿನಿಕ್ ಅಂಡ್ ಸೆಂಟರ್ ಫಾರ್ ಆಖಆಖ ಡೆವಲಪ್ಮೆಂಟ್ ರಿಸರ್ಚ್ ಅಂಡ್ ಇವ್ಯಾಲ್ಯುಯೇಷನ್ (CADRE)**
ಮಕ್ಕಳ ಲೈಂಗಿಕ ಕಿರುಕುಳ ಒಂದು ಕೈಪಿಡಿ ಪೋಷಕರಿಗೆ ಮತ್ತು ಆರೈಕೆ ನೀಡುವವರಿಗೆ



ಪ್ರಕಾಶನ

ಇವರಿಂದ ಬೆಂಬಲಿತ

ಎನ್ ಜಿ ಒ ಸಹಭಾಗಿ